# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 22-03-2022



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ಉದಯ ವಾಣಿ
6. ವಿಶ್ವವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ

# 18 ವರ್ಷ ಮೇಲ್ಪಟ್ಟವರಿಗೂ ಬೂಸ್ಟರ್ ಡೋಸ್



ನವದೆಹಲಿ(ಪಿಟಿಐ): 18 ವರ್ಷ ದಾಟಿದ ದೇಶದ ಎಲ್ಲಾ ವಯಸ್ಕರಿಗೂ ಬೂಸ್ಟರ್ ಡೋಸ್ ಪಡೆಯಲು ಅವಕಾಶ ಕಲ್ಪಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ವಿಶ್ವದ ಕೆಲವು ದೇಶಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಜತೆಗೆ, ಬೂಸ್ಟರ್ ಡೋಸ್ ಲಸಿಕೆ ಪಡೆಯದೆ ವಿದೇಶಗಳಿಗೆ ಪ್ರಯಾಣಿಸಲು ಕಷ್ಟವಾಗುತ್ತಿರುವುದರಿಂದ ಈ ಚಿಂತನೆ ನಡೆದಿದೆ ಎಂದು ತಿಳಿದುಬಂದಿದೆ.

2ನೇ ಡೋಸ್ ಲಸಿಕೆ ಪಡೆದ 9 ತಿಂಗಳಿನಿಂದ 39 ವಾರ ಪೂರ್ಣಗೊಂಡವರಿಗೆ ಆದ್ಯತೆ ಮೇರೆಗೆ ಬೂಸ್ಟರ್ ಡೋಸ್ ನೀಡಲಾಗುತ್ತದೆ.

ದೇಶದಲ್ಲಿ ಸದ್ಯ 181 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದ್ದು, ಇದರಲ್ಲಿ 2 ಕೋಟಿಗೂ ಹೆಚ್ಚು ಬೂಸ್ಟರ್ ಡೋಸ್‌ಗಳಾಗಿವೆ. ಪ್ರಸ್ತುತ ಭಾರತದಲ್ಲಿ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೇಲ್ಪಟ್ಟವರಿಗೆ ಮಾತ್ರ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಲಾಗುತ್ತಿದೆ.

18 ವರ್ಷದವರಿಗೂ ಬೂಸ್ಟರ್ ಡೋಸ್ ಲಸಿಕೆ ಉಚಿತವಾಗಿ ನೀಡಬೇಕೆ ಎಂಬ ಬಗ್ಗೆ ಸರ್ಕಾರವು ಚರ್ಚಿಸುತ್ತಿದೆ. ಜತೆಗೆ ಎಲ್ಲ ವಯಸ್ಕರಿಗೂ ಬೂಸ್ಟರ್ ಡೋಸ್ ಲಸಿಕೆ ಪಡೆಯಲು ಅವಕಾಶ ನೀಡಬೇಕು ಎಂದು ಸಂಸದರೂ ಸಹ ಒತ್ತಾಯಿಸಿದ್ದಾಗಿ ತಿಳಿದುಬಂದಿದೆ.

ಪ್ರಜಾವಾಣಿ

ಕೆಳಸೇತುವೆಯಲ್ಲಿ ನಿಂತಿತ್ತು ನೀರು • ಮುಖ್ಯರಸ್ತೆ ದಾಟುವಾಗ ದುರ್ಘಟನೆ • ಮೂವರಿಗೆ ಗಾಯ • ಕಾರು,ಬೈಕ್ ಜಪ್ತಿ

# ಬಿಬಿಎಂಪಿ ಕಸ ಸಾಗಣೆ ಲಾರಿ ಗುದ್ದಿ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಬಿಬಿಎಂಪಿಯ ಕಸ ಸಾಗಣೆ ಲಾರಿ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು ಭಾನುವಾರ ಸಂಭವಿಸಿದ ಅಪಘಾತದಲ್ಲಿ ಬಾಲಕಿ ಅಕ್ಷಯಾ (14) ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

‘ಹೆಬ್ಬಾಳ ನಿವಾಸಿ ಅಕ್ಷಯಾ, ಸದಾಶಿವನಗರ ಬಳಿಯ ಶಾಲೆಯೊಂದರಲ್ಲಿ 9ನೇ ತರಗತಿಯ ವಿದ್ಯಾರ್ಥಿನಿ. ಶಾಲೆ ಮುಗಿಸಿ ಮನೆಗೆ ಮರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಸೌಮ್ಯಾ, ಸಂಧ್ಯಾ ಹಾಗೂ ವಿಕಾಸ್ ಎಂಬುವರು ಗಾಯಗೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೃತ ಅಕ್ಷಯಾ, ಬಿಎಂಟಿಸಿ ಚಾಲಕ ಮತ್ತು ನಿರ್ವಾಹಕ ನರಸಿಂಹಮೂರ್ತಿ –ಗೀತಾ ದಂಪತಿಯ ಪುತ್ರಿ. ಬಾಲಕಿಯ ತಾಯಿ ನೀಡಿರುವ ದೂರು ಆಧರಿಸಿ ಆರ್.ಟಿ.ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಸ ಸಾಗಿಸುವ ವಾಹನವನ್ನು ಜಪ್ತಿ ಮಾಡಿ, ಚಾಲಕನನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

**ರಸ್ತೆ ದಾಟುವಾಗ ಅವಘಡ:** ‘ಶಾಲೆ ಮುಗಿದ ಬಳಿಕ ಅಕ್ಷಯಾ, ಬಸ್ಸಿನಲ್ಲಿ ಹೆಬ್ಬಾಳ ನಿಲ್ದಾಣಕ್ಕೆ ಬಂದಿದ್ದಳು. ಮನೆಗೆ ಹೋಗಲೆಂದು ಮುಖ್ಯರಸ್ತೆ ದಾಟುತ್ತಿದ್ದಳು. ರಸ್ತೆ ವಿಭಜಕ ಹತ್ತಿ ಇಳಿಯಲು ಮುಂದಾಗಿದ್ದಳು. ಅದೇ ಸಂದರ್ಭದಲ್ಲೇ ಅತೀ ವೇಗವಾಗಿ ಬಂದ ಬಿಬಿಎಂಪಿಯ ಲಾರಿ, ಅಕ್ಷಯಾಗೆ ಗುದ್ದಿತ್ತು. ನಂತರ, ಕಾರು ಹಾಗೂ ಬೈಕ್‌ಗೂ ವಾಹನವು ಡಿಕ್ಕಿ ಹೊಡೆದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದಿಂದಾಗಿ ಅಕ್ಷಯಾ, ರಸ್ತೆಯಲ್ಲೇ ಹಾರಿ ಬಿದ್ದಿದ್ದಳು. ತೀವ್ರ ಗಾಯಗೊಂಡು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಆಕೆಯ ಹಿಂದೆಯೇ ರಸ್ತೆ ದಾಟುತ್ತಿದ್ದ ಸೌಮ್ಯಾ ಹಾಗೂ ಬಾಲಕಿ ಸಂಧ್ಯಾಗೂ ಗಾಯವಾಗಿದೆ. ಸೌಮ್ಯಾ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಬೈಕ್ ಸವಾರ ವಿಕಾಸ್ ಸಹ ಆಸ್ಪತ್ರೆಯಲ್ಲಿದ್ದಾರೆ’ ಎಂದೂ ತಿಳಿಸಿವೆ.

**ಬಿಬಿಎಂಪಿ ವಿರುದ್ಧ ಆಕ್ರೋಶ:** ‘ಹೆಬ್ಬಾಳ ಬಸ್ ನಿಲ್ದಾಣ ಎದುರು ಪಾದಚಾರಿಗಳು ರಸ್ತೆ ದಾಟಲು, ಕೆಳಸೇತುವೆ ನಿರ್ಮಿಸಲಾಗಿದೆ. ಭಾನುವಾರ ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಂತಿತ್ತು. ಅದರ ತೆರವಿಗೆ ಕ್ರಮ ಕೈಗೊಂಡಿಲ್ಲ. ಇದುವೇ ಬಾಲಕಿ ಸಾವಿಗೆ ಕಾರಣ’ ಎಂದು ಸ್ಥಳೀಯರು ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಇದಾಗಿದ್ದು, ನಿತ್ಯವೂ ವಾಹನಗಳ ಓಡಾಟ ಹೆಚ್ಚಿರುತ್ತದೆ. ಪಾದಚಾರಿಗಳು ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಹೋಗಲೆಂದು ಕೆಳಸೇತುವೆ ನಿರ್ಮಿಸಲಾಗಿದೆ. ಇಲ್ಲಿ ನೀರು ನಿಂತಿದ್ದರಿಂದ, ದಾಟಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಅಕ್ಷಯಾ ಮುಖ್ಯರಸ್ತೆ ದಾಟಿ ಮನೆಗೆ ಹೋಗಲು ಮುಂದಾಗಿದ್ದಳು’ ಎಂದು ಸ್ಥಳೀಯರು ತಿಳಿಸಿದರು.

‘ನೀರು ನಿಂತು ಪಾದಚಾರಿಗಳ ಓಡಾಟಕ್ಕೆ ತೊಂದರೆಯಾದ ಬಗ್ಗೆ ಬಿಬಿಎಂಪಿ ಸಹಾಯವಾಣಿಗೆ ದೂರು ನೀಡಲಾಗಿತ್ತು. ಯಾರೊಬ್ಬರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಿಲ್ಲ. ಅಧಿಕಾರಿಗಳ ಬೇಜವಾಬ್ದಾರಿಯಿಂದಲೇ ಇದೀಗ ಅಪಘಾತವಾಗಿದೆ’ ಎಂದೂ ದೂರಿದರು.



ಹೆಬ್ಬಾಳ ಬಸ್ ನಿಲ್ದಾಣ ಬಳಿಯ ಕೆಳಸೇತುವೆಯಲ್ಲಿ ಸೋಮವಾರ ನಿಂತಿದ್ದ ನೀರಿನಲ್ಲಿ ನಡೆದುಕೊಂಡು ಹೋಗಲು ಪಾದಚಾರಿಗಳು ಕಷ್ಟಪಟ್ಟರು
– ಪ್ರಜಾವಾಣಿ ಚಿತ್ರ

## ‘ಕೆಳಸೇತುವೆಯಲ್ಲಿ ಹೆಚ್ಚು ನೀರಿರಲಿಲ್ಲ’

‘ಪ್ರಜಾವಾಣಿ’ ಜೊತೆ ಮಾತನಾಡಿದ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಪಾದಚಾರಿ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ಬಾಲಕಿ ರಸ್ತೆ ದಾಟಲು ಹೋಗಿ ಮೃತಪಟ್ಟಿದ್ದಾಳೆಂದು ಕೆಲವರು ಹೇಳುತ್ತಿದ್ದಾರೆ. ಸ್ಥಳ ಪರಿಶೀಲನೆ ನಡೆಸಿದಾಗ, ಕೆಳಸೇತುವೆಯಲ್ಲಿ ಹೆಚ್ಚು ನೀರು ಇರಲಿಲ್ಲ. ಈ ಆರೋಪದ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು’ ಎಂದಿದ್ದಾರೆ.

‘ಸದಾ ವಾಹನ ದಟ್ಟಣೆಯಿಂದ ಕೂಡಿರುವ ಮುಖ್ಯರಸ್ತೆ ಇದು. ಪಾದಚಾರಿಗಳು ರಸ್ತೆ ದಾಟುವುದಕ್ಕೆ ಇಲ್ಲಿ ಅವಕಾಶ ಇಲ್ಲ. ದುರ್ಘಟನೆ ನಡೆದ ಸ್ಥಳದ ಸಮೀಪದಲ್ಲೇ ಪಾದಚಾರಿಗಳ ಓಡಾಟಕ್ಕೆ ಕೆಳಸೇತುವೆ ಹಾಗೂ ಸುಸಜ್ಜಿತ ಸ್ಕೈವಾಕ್ ಇದೆ. ಆದರೂ ಬಾಲಕಿಯ ಜೀವಹಾನಿ ದುರದರಷ್ಟಕರ’ ಎಂದರು.

‘ಪಾದಚಾರಿಗಳು ರಸ್ತೆ ದಾಟಬಾರದೆಂದು ಮೂರೂವರೆ ಅಡಿ ಎತ್ತರದ ವಿಭಜಕ ಹಾಕಲಾಗಿದೆ. ಬಾಲಕಿ ಹಾಗೂ ಮತ್ತೊಬ್ಬರು, ರಸ್ತೆ ದಾಟಲು ಹೋಗಿದ್ದರು. ಒಬ್ಬರು ಪಾರಾದರು. ಬಾಲಕಿ ದಾಟಲು ಆಗಲಿಲ್ಲ’ ಎಂದೂ ಹೇಳಿದರು. ‘ಇಂತಹ ಘಟನೆ ಮರುಕಳಿಸದಂತೆ ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ’ ಎಂದೂ ಅವರು ತಿಳಿಸಿದರು.

## ಪೈಲಟ್ ಆಗುವ ಕನಸು ಹೊತ್ತಿದ್ದ ಅಕ್ಷಯಾ



ಅಕ್ಷಯಾ

ತುಮಕೂರು ಜಿಲ್ಲೆಯ ಮಧುಗಿರಿಯ ನರಸಿಂಹಮೂರ್ತಿ, ಬಿಎಂಟಿಸಿಯಲ್ಲಿ ಕೆಲಸಕ್ಕೆ ಸೇರಿ ಜೀವನ ಕಟ್ಟಿಕೊಂಡಿದ್ದರು. ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳ ಜೊತೆ ಹೆಬ್ಬಾಳದಲ್ಲಿ ವಾಸವಿದ್ದರು. ದೊಡ್ಡ ಮಗಳು ಅಕ್ಷಯಾ ಅಪಘಾತದಲ್ಲಿ ಮೃತಪಟ್ಟಿರುವುದರಿಂದ ಇಡೀ ಕುಟುಂಬ ಕಂಗಾಲಾಗಿದೆ.

ಮೃತದೇಹ ಇರಿಸಿದ್ದ ಯಲಹಂಕದ ಸರ್ಕಾರಿ ಆಸ್ಪತ್ರೆಗೆ ಬಂದಿದ್ದ ಕುಟುಂಬಸ್ಥರು, ಅಕ್ಷಯಾಳನ್ನು ನೆನೆದು ಕಣ್ಣೀರಿಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ನರಸಿಂಹಮೂರ್ತಿ, ‘ಮಗಳು ಅಕ್ಷಯಾ, ಓದಿನಲ್ಲಿ ಜಾಣೆಯಾಗಿದ್ದಳು. ಪೈಲಟ್ ಆಗುವ ಕನಸು ಹೊತ್ತಿದ್ದಳು. ಈಗ ವಿಮಾನವಿಲ್ಲದೇ ಹಾರಿ ಹೋದಳು’ ಎಂದು ಬಿಕ್ಕಿ ಬಿಕ್ಕಿ ಅತ್ತರು. ‘ನನಗೆ ಎಷ್ಟೇ ಕಷ್ಟ ಇದ್ದರೂ ಮಕ್ಕಳಿಗೆ ಹೇಳಿರಲಿಲ್ಲ. ಇಬ್ಬರೂ ಮಕ್ಕಳನ್ನು ಚೆನ್ನಾಗಿ ಓದಿಸುವ ಆಸೆ ಇತ್ತು. ಅಕ್ಷಯಾ ಸಹ ನನ್ನ ಕಷ್ಟ ಅರ್ಥ ಮಾಡಿಕೊಂಡು ಓದುತ್ತಿದ್ದಳು. ₹ 100 ಕೊಟ್ಟರೆ ವಾರಗಟ್ಟಲೇ ಜೊತೆಯಲ್ಲಿಟ್ಟುಕೊಳ್ಳುತ್ತಿದ್ದಳು. ಆಕೆಯನ್ನು ಕಳೆದುಕೊಂಡು, ಜೀವನವೇ ಬೇಡವೆನಿಸುತ್ತಿದೆ’ ಎಂದೂ ಕಣ್ಣೀರಿಟ್ಟರು.

## ‘₹ 2 ಲಕ್ಷ ಪರಿಹಾರ’

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಭೈರತಿ ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಪಘಾತ ಸ್ಥಳ ಹಾಗೂ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರು.

ಕುಟುಂಬದವರಿಗೆ ಸಾಂತ್ವನ ಹೇಳಿದ ಭೈರತಿ ಸುರೇಶ್, ‘ಅಪಘಾತದ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ತನಿಖೆಗೆ ಸೂಚನೆ ನೀಡಿದ್ದಾರೆ. ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು. ಬಾಲಕಿಯ ತಂದೆಗೆ, ₹ 2 ಲಕ್ಷ ಪರಿಹಾರ ನೀಡಿದರು.

## ‘ಬಿಬಿಎಂಪಿಯನ್ನು ಮೊದಲು ಸ್ವಚ್ಛಗೊಳಿಸಿ’



**ಬೆಂಗಳೂರು:** ನಗರದ ಗೌರವ ಮತ್ತು ಪ್ರತಿಷ್ಠೆಯನ್ನು ಹಾಳು ಮಾಡುತ್ತಿರುವ ಭ್ರಷ್ಟ ಅಧಿಕಾರಿಗಳನ್ನು ಬಿಬಿಎಂಪಿಯಿಂದ ಹೊರಹಾಕಿ ಮೊದಲು ಪಾಲಿಕೆಯನ್ನು ಸ್ವಚ್ಛಗೊಳಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಕಸ ಸಾಗಣೆಯ ಲಾರಿ ಹರಿದು ಶಾಲಾ ಬಾಲಕಿ ಮೃತಪಟ್ಟಿರುವ ಘಟನೆ ಕುರಿತು ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಬಾಳಿ, ಬದುಕಬೇಕಿದ್ದ ಬಾಲಕಿ ಹೆಬ್ಬಾಳದ ಮೇಲುಸೇತುವೆ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾಳೆ. ಬಿಬಿಎಂಪಿ ಆಡಳಿತದ ಬೇಜವಾಬ್ದಾರಿ, ನಿರ್ಲಕ್ಷ್ಯ, ಅಸಮರ್ಪಕ ಕಸ ವಿಲೇವಾರಿ, ರಸ್ತೆ ಮತ್ತು ಚರಂಡಿಗಳ ನಿರ್ವಹಣೆಯಲ್ಲಿನ ಲೋಪದಿಂದ ಜನರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ’ ಎಂದಿದ್ದಾರೆ.

ಭಾನುವಾರ ಸುರಿದ ಮಳೆಯಿಂದ ಹೆಬ್ಬಾಳ ಫ್ಲೈ ಓವರ್ ಬಳಿಯ ಕೆಳಸೇತುವೆಯಲ್ಲಿ ನೀರು ತುಂಬಿತ್ತು. ಹೀಗಾಗಿ ಮಕ್ಕಳು ಅಂಡರ್ ಪಾಸ್‌ನಲ್ಲಿ ಹೋಗದೇ ರಸ್ತೆ ದಾಟುತ್ತಿದ್ದರು. ದುರ್ಘಟನೆಗೆ ಬಿಬಿಎಂಪಿ ಆಡಳಿತವೇ ಹೊಣೆ ಎಂದು ಹೇಳಿದ್ದಾರೆ.

ಹೈಕೋರ್ಟ್ ಛೀಮಾರಿ ಹಾಕಿದ್ದರೂ, ಎಂಜಿನಿಯರ್‌ಗಳನ್ನು ಜೈಲಿಗೆ ಅಟ್ಟುವುದಾಗಿ ಎಚ್ಚರಿಕೆ ನೀಡಿದ್ದರೂ ಎಮ್ಮೆ ಚರ್ಮದ ಪಾಲಿಕೆ ಪಾಠ ಕಲಿತಿಲ್ಲ. ಬಿಬಿಎಂಪಿ ಆಟಗಳಿಗೆ ಸೀಟಿ ಹೊಡೆಯುತ್ತಾ, ಅಲ್ಲಿನ ಅದಕ್ಷ ಅಧಿಕಾರಿಗಳನ್ನು ಪೊರೆದು ಪೋಷಣೆ ಮಾಡುತ್ತಿರುವ ಸರ್ಕಾರಕ್ಕೆ ಆತ್ಮಸಾಕ್ಷಿ ಎನ್ನುವುದೇ ಇಲ್ಲವಾಗಿದೆ. ಬಿಬಿಎಂಪಿಯಿಂದಲೇ ಬೆಂಗಳೂರಿನ ಸ್ವಚ್ಚತೆ ಆರಂಭವಾಗಬೇಕು ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ



ನಗರದ ಅವೆನ್ಯೂ ರಸ್ತೆಯಲ್ಲಿ ಸೋಮವಾರ ಸುರಿವ ಮಳೆಯಲ್ಲೇ ಸಾರ್ವಜನಿಕರು ನಡೆದುಕೊಂಡು ಹೋದರು
– ಪ್ರಜಾವಾಣಿ ಚಿತ್ರಗಳು

## ಸದಾಶಿವನಗರದಲ್ಲಿ ಧರೆಗುರುಳಿದ ಮರ

# ಸತತ ಮೂರನೇ ದಿನವೂ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಎರಡು ದಿನಗಳಿಂದ ಆಗಾಗ ಬಿಡುವು ಕೊಡುತ್ತಾ ಮಳೆ ಸುರಿಯುತ್ತಿದ್ದು, ಸೋಮವಾರವೂ ಹಲವೆಡೆ ಬಿರುಸಿನ ಮಳೆ ಆಯಿತು.

ಭಾನುವಾರ ರಾತ್ರಿಯೂ ಬಹುತೇಕ ಪ್ರದೇಶಗಳಲ್ಲಿ ಮಳೆಯಾಗಿತ್ತು. ಗಾಳಿಯೂ ಜೋರಾಗಿ ಬೀಸಿತ್ತು. ಸದಾಶಿವನಗರದಲ್ಲಿ ಮರವೊಂದು ಉರುಳಿ ಬಿದ್ದಿತ್ತು. ಬಿಬಿಎಂಪಿ ಸಿಬ್ಬಂದಿ ಮರವನ್ನು ತೆರವುಗೊಳಿಸಿದರು. ಚರಂಡಿಯಲ್ಲಿ ಕಸ ಕಡ್ಡಿ ಕಟ್ಟಿಕೊಂಡಿದ್ದರಿಂದ ಕೆಲವೆಡೆ ರಸ್ತೆಯಲ್ಲೇ ನೀರು ಹರಿಯಿತು.

ಸೋಮವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಿಸಿಲಿನ ತಾಪ ಹೆಚ್ಚಿತ್ತು. ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣ ಉಂಟಾಗಿ, ತಂಪು ಗಾಳಿ ಬೀಸಲಾರಂಭಿಸಿತ್ತು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಹಲವೆಡೆ ತುಂತುರು ಮಳೆ ಸುರಿಯಿತು.

ರಸ್ತೆಯಲ್ಲಿ ಹೊರಟಿದ್ದ ಪಾದಚಾರಿಗಳು, ಅಕ್ಕ–ಪಕ್ಕದ ಅಂಗಡಿಗಳಲ್ಲಿ ಆಶ್ರಯ ಪಡೆದರು. ಬೈಕ್ ಸವಾರರು, ಕೆಳಸೇತುವೆ ಹಾಗೂ ಮರಗಳ ಕೆಳಗೆ ನಿಂತುಕೊಂಡಿದ್ದರು. ಕೆಲವರು, ಸುರಿಯುವ ಮಳೆಯಲ್ಲೇ ನಡೆದುಕೊಂಡು ಹೋದರು.

ಶಾಲಾ– ಕಾಲೇಜು ಮುಗಿಸಿ ಮನೆಗೆ ಹೊರಟಿದ್ದ ವಿದ್ಯಾರ್ಥಿಗಳು, ಮಳೆಯಲ್ಲೇ ಹೆಜ್ಜೆ ಹಾಕಿದರು. ಕೆಲವರು ಮಳೆಯಲ್ಲಿ ಕುಣಿದು ಸಂಭ್ರಮಿಸಿದರು.

ಕೆಲರಸ್ತೆಗಳಲ್ಲಿ ಜನರು, ತಲೆ ಮೇಲೆ ಬಟ್ಟೆ ಹಾಗೂ ಪ್ಲಾಸ್ಟಿಕ್ ಹೊತ್ತುಕೊಂಡು ಸಾಗಿದ್ದು ಕಂಡುಬಂತು. ಕೆಲವೆಡೆ ಮಹಿಳೆಯರು, ಸೀರೆ ಸೆರಗನ್ನು ಮಕ್ಕಳಿಗೆ ಹೊದಿಸಿ ಮುಂದೆ ಸಾಗಿದರು. ರಾಜರಾಜೇಶ್ವರಿನಗರ, ನಾಯಂಡ ನಹಳ್ಳಿ, ದೀಪಾಂಜಲಿನಗರ, ಚಾಮರಾಜಪೇಟೆ, ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ಲಗ್ಗೆರೆ, ಮಲ್ಲೇಶ್ವರ, ಶೇಷಾದ್ರಿಪುರ, ಶಿವಾಜಿನಗರ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್, ಜಯನಗರ, ಬಸವನಗುಡಿ, ಬನಶಂಕರಿ, ಹನುಮಂತನಗರ ಗಿರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉತ್ತಮ ಮಳೆ ಆಯಿತು.

**ಹರಿಯುವ ನೀರಿನಲ್ಲೇ ಸಂಚಾರ:** ರೆಸಿಡೆನ್ಸಿ ರಸ್ತೆ, ಅವೆನ್ಯೂ ರಸ್ತೆ, ಕೆಂಪೇಗೌಡ ರಸ್ತೆ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ ಸಂಪಿಗೆ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ನಗರದ ಹಲವೆಡೆ ಕಾಮಗಾರಿ ನಡೆಯುತ್ತಿದ್ದು, ಅದಕ್ಕಾಗಿ ರಸ್ತೆ ಅಗೆಯಲಾಗಿದೆ. ಅಲ್ಲೆಲ್ಲ ನೀರು ನಿಂತು ಸಮಸ್ಯೆ ಆಯಿತು.

# ಆಗಸ್ಟ್‌ನಲ್ಲಿ ನಾಲ್ಕನೇ ಅಲೆ ಸಾಧ್ಯತೆ: ಸಚಿವ ಸುಧಾಕರ್

ಬೆಂಗಳೂರು: 'ಐಐಟಿ ಕಾನ್ಪುರ ತಂಡದ ಅಧ್ಯಯನ ಪ್ರಕಾರ ಆಗಸ್ಟ್‌ನಲ್ಲಿ ಕೋವಿಡ್ ನಾಲ್ಕನೇ ಅಲೆ ಬರುವ ಸಾಧ್ಯತೆ ಇದೆ. ಆದರೆ, ದೇಶದಲ್ಲಿ ಲಸಿಕಾ ಅಭಿಯಾನ ವ್ಯಾಪಕವಾಗಿ ಕೈಗೊಂಡಿರುವುದರಿಂದ ಆತಂಕ ಪಡುವ ಅಗತ್ಯ ಇಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಶೂನ್ಯ ವೇಳೆಯಲ್ಲಿ ಶಶಿಲ್ ಜಿ. ನಮೋಶಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹೊಸ ತಳಿ ಬಿಎ2 ಫಿಲಿಪ್ಪೀನ್ಸ್‌ನಲ್ಲಿ ಕಾಣಿಸಿಕೊಂಡಿದ್ದು, 40 ದೇಶಗಳಲ್ಲಿ ಹಬ್ಬಿದೆ. ಹೀಗಾಗಿ, ಎಚ್ಚರಿಕೆ ಕ್ರಮಗಳು ಅಗತ್ಯ' ಎಂದು ವಿವರಿಸಿದರು.



'ಮುಖ್ಯಮಂತ್ರಿ ಅವರ ಜತೆಯೂ ಈ ಬಗ್ಗೆ ಸಭೆ ನಡೆಸಲಾಗುವುದು. ರಾಜ್ಯದಲ್ಲಿ 10.25 ಕೋಟಿಗೂ ಹೆಚ್ಚು ಲಸಿಕಾ ಡೋಸ್‌ಗಳನ್ನು ನೀಡಲಾಗಿದೆ. ಇದರಲ್ಲಿ 4.97 ಕೋಟಿಗೂ ಹೆಚ್ಚು ಮಂದಿ ಮೊದಲ ಡೋಸ್ ಪಡೆದಿದ್ದಾರೆ. 4.76 ಕೋಟಿಗೂ ಹೆಚ್ಚು ಮಂದಿ ಎರಡನೇ ಡೋಸ್ ಪಡೆದಿದ್ದು, ಶೇಕಡ 96 ರಷ್ಟು ಪ್ರಗತಿ ಸಾಧಿಸಲಾಗಿದೆ. 12 ವರ್ಷ ಮೇಲ್ಪಟ್ಟ ಮಕ್ಕಳಿಗೂ ಲಸಿಕೆ ನೀಡುವ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ' ಎಂದು ವಿವರಿಸಿದರು.

'ಕೋವಿಡ್ ತಡೆಯಲು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಸೇರಿದಂತೆ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಮೂರು ಅಲೆಗಳಿಂದಾಗಿ ಸಾಕಷ್ಟು ಅನುಭವ ದೊರೆತಿದ್ದು, ಎಲ್ಲ ರೀತಿಯಲ್ಲೂ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. 55,256 ಆಮ್ಲಜನಕ ಹೊಂದಿರುವ ಹಾಸಿಗೆಗಳಿವೆ. 165 ಪ್ರಯೋಗಾಲಯಗಳಿವೆ. ಹೀಗಾಗಿ, ನಾಲ್ಕನೇ ಅಲೆ ಬಂದರೂ ಪರಿಣಾಮಕಾರಿ ಎದುರಿಸುವ ಸಾಮರ್ಥ್ಯ ನಮಗಿದೆ' ಎಂದು ತಿಳಿಸಿದರು.

ನಿರ್ಲಕ್ಷ್ಯ | ಬಹುತೇಕ ಪಾದಚಾರಿ ಸುರಂಗ ಮಾರ್ಗಗಳು ಮಳೆನೀರು, ಕೊಳಚೆ ನೀರಿಂದ ಆವೃತ | ಸ್ಕೈವಾಕ್ ಹತ್ತುವಷ್ಟರಲ್ಲಿ ವೃದ್ಧರು, ಮಕ್ಕಳು ಸುಸ್ತು

# ಅಂಡರ್‌ಪಾಸ್, ಸ್ಕೈವಾಕ್‌ಗಳ ನಿರ್ವಹಣೆ ಮರೆತ ಪಾಲಿಕೆ

• ವಿಶ್ವನಾಥ ಮಲೇಬೆನ್ನೂರು

**ಕನ್ನಡಪ್ರಭ ವಾರ್ತೆ** ಬೆಂಗಳೂರು

ರಸ್ತೆ ದಾಟುವ ವೇಳೆ ಸಂಭವಿಸುವ ಅಪಘಾತಗಳಿಂದ ಪಾದಚಾರಿಗಳು ಸಾವನ್ನಪ್ಪುವುದನ್ನು ತಪ್ಪಿಸಲು ನಗರದಲ್ಲಿ 19 ಕಡೆ ಪಾದಚಾರಿ ಸುರಂಗ ಮಾರ್ಗ ಹಾಗೂ 48 ಕಡೆ ಸ್ಕೈವಾಕ್ ನಿರ್ಮಿಸಿರುವ ಬಿಬಿಎಂಪಿ, ಅವುಗಳ ಸಮರ್ಪಕ ನಿರ್ವಹಣೆ ಮಾಡದ ಪರಿಣಾಮ ಅಮಾಯಕರು ಜೀವ ಕಳೆದುಕೊಳ್ಳುವ ಪರಿಸ್ಥಿತಿ ಸೃಷ್ಟಿಯಾಗಿದೆ!

ನಿರ್ವಹಣೆ ಕೊರತೆಯಿಂದ ಸುರಂಗಮಾರ್ಗಗಳು ಮಳೆ ನೀರು ಹಾಗೂ ಕೊಳಚೆ ನೀರು ಸಂಗ್ರಹಕ್ಕೆ ಸೀಮಿತವಾಗಿದೆ. ಇದರಿಂದ ಪಾದಚಾರಿ ಸುರಂಗ ಮಾರ್ಗ ಬಳಸಲು ಸಾಧ್ಯವಾಗದೆ ವಾಹನ ಸಂಚಾರ ದಟ್ಟಣೆ ನಡುವೇ ರಸ್ತೆ ದಾಟಲು ಮುಂದಾಗಿ ಪಾದಚಾರಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಾದ ನೃಪತುಂಗ ರಸ್ತೆ, ಚಾಲುಕ್ಯ ವೃತ್ತ, ಶೇಷಾದ್ರಿ ರಸ್ತೆ, ಕೆ.ಆರ್.ಮಾರುಕಟ್ಟೆ, ರಾಜಕುಮಾರ್ ರಸ್ತೆ, ಕಬ್ಬನ್ ಪಾರ್ಕ್, ಪುರಭವನದ ಮುಂಭಾಗ ಸೇರಿದಂತೆ ಅನೇಕ ಕಡೆ ಪಾದಚಾರಿ ಸುರಂಗ ಮಾರ್ಗ ಮತ್ತು ಪಾದಚಾರಿ ಮೇಲ್ಸೇತುವೆ(ಸ್ಕೈವಾಕ್) ಇವೆ. ಇವುಗಳು ನಿರ್ವಹಣೆ ಕೊರತೆಯಿಂದ ಬಳಲುತ್ತಿವೆ. ಹೀಗಾಗಿ,



ಸಾರ್ವಜನಿಕರು, ಮಹಿಳೆಯರು, ಮಕ್ಕಳು ಜೀವದ ಹಂಗು ತೊರೆದು ರಸ್ತೆ ದಾಟಬೇಕಿದೆ.

**ಹಲವೆಡೆ ಬೀಗ:** ಕೆಲವು ಕಡೆ ನಿರ್ವಹಣೆ ಸಮಸ್ಯೆಯಿಂದ ಬಿಬಿಎಂಪಿಯಿಂದಲೇ ಪಾದಚಾರಿ ಸುರಂಗ ಮಾರ್ಗಗಳಿಗೆ ಬೀಗ ಹಾಕಲಾದ ಉದಾಹರಣೆಗಳೂ ಇವೆ. ಇನ್ನು ಸ್ವಲ್ಪ ಮಳೆ ಬಂದರೆ ಸಾಕು ಮಳೆ ನೀರು ಹರಿದು ಬಂದು ಈ ಪಾದಚಾರಿ ಸುರಂಗ ಮಾರ್ಗದಲ್ಲಿ ಸಂಗ್ರಹವಾಗಲಿದೆ. ತಗ್ಗು ಪ್ರದೇಶದಿಂದ ಈ ಸುರಂಗ ಮಾರ್ಗಗಳು ಇರುವುದರಿಂದ ನೀರು ಹೊರ ಹೋಗುವುದಕ್ಕೆ ಸೂಕ್ತ ವ್ಯವಸ್ಥೆಗಳಿಲ್ಲ. ನಿರ್ವಹಣೆ ಇಲ್ಲದಿರುವುದು ಮತ್ತು ಸೂಕ್ತ ಭದ್ರತೆ ಇಲ್ಲದಿರುವುದರಿಂದ ಕಸ ಹಾಕುವ ತಾಣಗಳಾಗಿವೆ.

**ಜಾಹೀರಾತು ಪ್ರದರ್ಶನಕ್ಕೆ ಸೀಮಿತ:** ಇನ್ನು ಸ್ಕೈವಾಕ್‌ಗಳನ್ನು ಬಿಬಿಎಂಪಿ ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ಮಿಸಿದೆ. ಆದರೆ, ಈ ಸ್ಕೈವಾಕ್‌ಗಳು ಬಿಬಿಎಂಪಿ ಮತ್ತು ಖಾಸಗಿ ವ್ಯಕ್ತಿಗಳಿಗೆ ಆದಾಯ ಮೂಲವಾಗಿರುವುದು ಬಿಟ್ಟರೆ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತಿಲ್ಲ. ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ಸ್ಕೈವಾಕ್ ಮೆಟ್ಟಿಲುಗಳನ್ನು ಹತ್ತಿ ಇಳಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ರಸ್ತೆ ದಾಟಬೇಕಾದ ನಿವಾರ್ಯವಾಗಿದೆ.

ಲಿಫ್ಟ್ ವ್ಯವಸ್ಥೆ, ಸಿಸಿ ಕ್ಯಾಮರಾ, ಭದ್ರತಾ ಸಿಬ್ಬಂದಿ ನಿಯೋಜನೆ ಮಾಡಬೇಕೆಂಬ ನಿಯಮವಿದ್ದರೂ ನಿರ್ವಹಣೆ ಮಾಡುತ್ತಿರುವ ಖಾಸಗಿಯವರು ಯಾವುದನ್ನೂ ಪಾಲನೆ ಮಾಡುತ್ತಿಲ್ಲ. ಕೇವಲ ಜಾಹೀರಾತು ಪ್ರದರ್ಶನಕ್ಕೆ ಮಾತ್ರ ಈ ಸ್ಕೈವಾಕ್ ಸೀಮಿತವಾಗಿವೆ. ಪರಿಶೀಲನೆ ನಡೆಸಬೇಕಾದ ಅಧಿಕಾರಿಗಳು ಈ ಕಡೆ ತಲೆ ಹಾಕುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

## ಉತ್ತಮ ಸ್ಥಿತಿಯಲ್ಲಿವೆ: ಪಾಲಿಕೆ ಅಧಿಕಾರಿಗಳು

ಬಿಬಿಎಂಪಿ ಅಧಿಕಾರಿಗಳು ಪಾದಚಾರಿ ಸುರಂಗ ಮಾರ್ಗಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದೇವೆ. ಸಿಸಿಟಿವಿ ಕ್ಯಾಮರಾ ಅಳವಡಿಕೆ ಮಾಡಿದ್ದೇವೆ. ಭದ್ರತೆಗೆ ಗೃಹ ರಕ್ಷಕದಳದ ಸಿಬ್ಬಂದಿ ನಿಯೋಜಿಸಿದ್ದೇವೆ. ಅವರು ಎರಡು ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುತ್ತಾರೆ.

**ಪಾದಚಾರಿಗಳಿಗಾಗಿ ಸ್ಕೈವಾಕ್, ಸುರಂಗ ಮಾರ್ಗಗಳನ್ನು ನಿರ್ಮಿಸಲಾಗಿದೆ. ಸಿಸಿಟಿವಿ ಕ್ಯಾಮರಾ, ಭದ್ರತಾ ಸಿಬ್ಬಂದಿ ಸಹ ನಿಯೋಜಿಸಲಾಗಿದೆ. ಸಾರ್ವಜನಿಕರು ಆತುರದಿಂದ ನೇರವಾಗಿ ರಸ್ತೆ ದಾಟಲು ಹೋಗಬಾರದು.**

• **ಪ್ರಹ್ಲಾದ್** ಮುಖ್ಯ ಎಂಜಿನಿಯರ್, ರಸ್ತೆ ಮತ್ತು ಮೂಲಸೌಕರ್ಯ

# ನಗರದಲ್ಲಿ 50 ಆಸುಪಾಸಿಗೆ ತಗ್ಗಿದ ಕೊರೋನಾ ಕೇಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಸೋಮವಾರ 53 ಮಂದಿಗೆ ಕೊರೋನಾ ಸೋಂಕು ತಗುಲಿದ್ದು, 110 ಮಂದಿ ಗುಣಮುಖರಾಗಿದ್ದಾರೆ. ಒಬ್ಬರು ಮೃತಪಟ್ಟಿದ್ದಾರೆ. ಸದ್ಯ 1648 ಸಕ್ರಿಯ ಸೋಂಕಿತರು ಆಸ್ಪತ್ರೆ/ಮನೆಯಲ್ಲಿ ಚಿಕಿತ್ಸೆ, ಆರೈಕೆಯಲ್ಲಿದ್ದಾರೆ. 7,241 ಸಾವಿರ ಪರೀಕ್ಷೆ ನಡೆದಿದ್ದು, ಶೇ.0.8ರಷ್ಟು ಪಾಸಿಟಿವಿಟಿ ದರ ದಾಖಲಾಗಿದೆ. ಭಾನುವಾರಕ್ಕೆ ಹೋಲಿಸಿದರೆ ಪ್ರಕರಣಗಳು 38 ಕಡಿಮೆಯಾಗಿವೆ(ಭಾನುವಾರ 91 ಕೇಸ್, 1 ಸಾವು).

ಮಾ.16ರಿಂದ ಸತತ ಮೂರು ದಿನ 100ಕ್ಕಿಂತ ಕಡಿಮೆ ಇದ್ದ ಹೊಸ ಪ್ರಕರಣಗಳು, ಮಾ.19ರಂದು ಮತ್ತೆ 100ಕ್ಕೆ ಹೆಚ್ಚಿದ್ದವು. ಬಳಿಕ ಪರೀಕ್ಷೆಗಳು ಇಳಿಕೆಯಾದಂತೆ ಮತ್ತೆ ಇಳಿಮುಖವಾಗಿವೆ. 2020ರ ಜೂನ್ ತಿಂಗಳ ಬಳಿಕ ಇದೇ ಮೊದಲ ಬಾರಿ 50 ಆಸುಪಾಸಿಗೆ ತಗ್ಗಿವೆ. ಸದ್ಯ ಸಕ್ರಿಯ ಸೋಂಕಿತರ ಪೈಕಿ 43 ಮಂದಿ ಆಸ್ಪತ್ರೆಯಲ್ಲಿದ್ದಾರೆ. ಇದರಲ್ಲಿ ಏಳು ಮಂದಿ ವೆಂಟಿಲೇಟರ್‌ನಲ್ಲಿ, 10 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈವರೆಗೆ ಸೋಂಕಿಗೆ ಒಳಗಾದವರ ಸಂಖ್ಯೆ 17.8 ಲಕ್ಷಕ್ಕೆ, ಗುಣಮುಖರ ಸಂಖ್ಯೆ 17.62 ಲಕ್ಷಕ್ಕೆ ಏರಿಕೆಯಾಗಿದೆ. ಸಾವಿನ ಸಂಖ್ಯೆ 16,952 ಇದೆ. ನಗರದಲ್ಲಿ ಐದಕ್ಕೂ ಹೆಚ್ಚು ಕೊರೋನಾ ಪ್ರಕರಣವಿರುವ 1 ಕ್ಲಸ್ಟರ್ ವಲಯವಿದೆ ಎಂದು ಬಿಬಿಎಂಪಿ ಕೊರೋನಾ ವರದಿಯಲ್ಲಿ ತಿಳಿಸಲಾಗಿದೆ.

# ನಗರದಲ್ಲಿ ಸತತ 2ನೇ ದಿನವೂ ಅಕಾಲಿಕ ಬೇಸಿಗೆ ಮಳೆಯಬ್ಬರ

## ಗುಡುಗು ಸಹಿತ ಭರ್ಜರಿ ಮಳೆ | ಮರಗಳು ಧರೆಗೆ

## ಕೆಲ ರಸ್ತೆಗಳು ಜಲಾವೃತಗೊಂಡು ಜನರ ಪರದಾಟ



ಮಳೆಗೆ ನೀರು ತುಂಬಿಕೊಂಡ ಅಂಬೇಡ್ಕರ್ ವೀದಿ ರಸ್ತೆಯಲ್ಲಿ ವಾಹನ ಸವಾರರು ಕಷ್ಟಪಟ್ಟು ಸಂಚರಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಸತತ 2ನೇ ದಿನವೂ ಬೇಸಿಗೆ ಮಳೆಯ ಅಬ್ಬರ ಮುಂದುವರೆಯಿತು. ಸೋಮವಾರ ಸಂಜೆ ಗುಡುಗು ಸಹಿತ ಸುರಿದ ಮಳೆಗೆ ಒಂದೆರಡು ಕಡೆ ಮರ ಮತ್ತು ಮರದ ಕೊಂಬೆಗಳು ಬಿದ್ದವು. ಕೆಲವು ರಸ್ತೆಗಳು ಮತ್ತು ಅಂಡರ್ ಪಾಸ್‌ಗಳಲ್ಲಿ ನೀರು ನಿಂತ ಹಿನ್ನೆಲೆ ಸಂಚಾರ ಅಸ್ತವ್ಯಸ್ತವಾಗಿ ವಾಹನ ಸವಾರರು ಪರದಾಡಿದರು.

ಮಧ್ಯಾಹ್ನದಿಂದಲೇ ಗಾಳಿ ಬೀಸುವಿಕೆ ಪ್ರಮಾಣ ಹೆಚ್ಚಾಗಿ ಮೋಡ ಮುಸುಕಿದ ವಾತಾವರಣ ಸೃಷ್ಟಿಯಾಯಿತು. ಸಂಜೆ 4 ಗಂಟೆ ನಂತರ ಸುರಿದ ಜೋರು ಮಳೆಗೆ ಯಲಚೇನಹಳ್ಳಿ ಪೈಪ್‌ಲೈನ್ ರಸ್ತೆ ಹಾಗೂ ಸದಾಶಿವನಗರದಲ್ಲಿ ತಲಾ ಒಂದು ಮರ ಉರುಳಿ ಬಿದ್ದಿವೆ. ಸದಾಶಿವನಗರ ಸೇರಿದಂತೆ ಕೆಲವೆಡೆ ಮರದ ಕೊಂಬೆಗಳು ಸಹ ಮುರಿದು ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ದೂರಿನ ಮೇರೆಗೆ ಬಿಬಿಎಂಪಿ ಸಿಬ್ಬಂದಿ ಮರ ಮತ್ತು ಕೊಂಬೆಗಳನ್ನು ತೆರವುಗೊಳಿಸಿದರು ಎಂದು ಬಿಬಿಎಂಪಿ ಸಹಾಯವಾಣಿ ತಿಳಿಸಿದೆ.

ಶಾಂತಿನಗರದ ಬಜಾರ್ ಸ್ಟ್ರೀಟ್, ಸ್ವಾತಂತ್ರ್ಯ ಉದ್ಯಾನ, ಕೆ.ಆರ್.ವೃತ್ತ, ಹಂಪಿನಗರ, ರಾಜಾಜಿನಗರ, ಟೌನ್ ಹಾಲ್, ಕೆ.ಆರ್.ಮಾರುಕಟ್ಟೆ, ಅಂಬೇಡ್ಕರ್ ವೀದಿ, ಹೆಬ್ಬಾಳ, ನಾಗವಾರ ಜಂಕ್ಷನ್, ಓಕಳಿಪುರಂ ಅಂಡರ್ ಪಾಸ್, ಮೆಜೆಸ್ಟಿಕ್ ಸುತ್ತ ಸೇರಿದಂತೆ ಹಲವು ರಸ್ತೆಗಳಲ್ಲಿ ರಾತ್ರಿವರೆಗೂ ಮಳೆ ನೀರು ನಿಂತದ್ದು ಕಂಡು ಬಂತು.

## ಇಂದು, ನಾಳೆ ಸಹ ಮಳೆ ನಿರೀಕ್ಷೆ

ಅಂಡಮಾನ್ ದ್ವೀಪ ಸಮುದ್ರದಲ್ಲಿ ವಾಯುಭಾರ ಕುಸಿತ ತೀವ್ರಗೊಂಡ ಪರಿಣಾಮ ಬೆಂಗಳೂರು ನಗರ ಮತ್ತು ಗ್ರಾಮಾಂತರದ ಹಲವು ಪ್ರದೇಶಗಳಲ್ಲಿ ಮಾ.23ರ ವರೆಗೆ ಇದೇ ರೀತಿ ಗುಡುಗು ಸಹಿತ ಮಳೆ ಮುಂದುವರಿಯುವ ನಿರೀಕ್ಷೆ ಇದೆ. ಈ ವೇಳೆ ಮೋಡ ಮುಸುಕಿದ ವಾತಾವರಣ ಕಂಡು ಬರಲಿದ್ದು, ಆಗಾಗ ಜೋರು ಗಾಳಿ ಬೀಸಲಿದೆ. ತಾಪಮಾನ ಗರಿಷ್ಠ 33 ಮತ್ತು ಕನಿಷ್ಠ 21ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ.

## ನಾಗೇನಹಳ್ಳಿ ವ್ಯಾಪ್ತಿಯಲ್ಲಿ 48 ಮಿ.ಮೀ. ಮಳೆ

ನಗರದ ವಿ.ನಾಗೇನಹಳ್ಳಿ ವ್ಯಾಪ್ತಿಯಲ್ಲಿ ಅಧಿಕ 48 ಮಿ.ಮೀ. ಮಳೆ ದಾಖಲಾಗಿದೆ. ಅಂಜನಾಪುರ 24 ಮಿ.ಮೀ., ಲಕ್ಕಸಂದ್ರ 21, ಗೊಟ್ಟಿಗೆರೆ 18.5, ಯಲಹಂಕ ಮತ್ತು ಕೊಡಿಗೇಹಳ್ಳಿಯಲ್ಲಿ ತಲಾ 18, ಆರ್.ಆರ್.ನಗರ 17.5, ರಾಜಮಹಲ್ ಗುಟ್ಟಳ್ಳಿ 15, ಹಂಪಿನಗರ 13.5, ಕೋರಮಂಗಲದಲ್ಲಿ 11.5 ಮಿ.ಮೀ ಮಳೆ ಸುರಿದ ಬಗ್ಗೆ ವರದಿಯಾಗಿದೆ. ಉಳಿದಂತೆ ಹಲವೆಡೆ ತುಂತುರು ಮಳೆ ಸುರಿದಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.

**ಮುನ್ನೆಚ್ಚರಿಕೆ** ವಿಶ್ವದಾದ್ಯಂತ ಮತ್ತೆ ಕೋವಿಡ್ ಸೋಂಕಿನ ಪ್ರಮಾಣ ಏರಿಕೆ ಹಿನ್ನೆಲೆ | ಬೂಸ್ಟರ್ ಡೋಸ್ ಪಡೆದವರಿಗೆ ಮಾತ್ರ ಕೆಲವೆಡೆ ಪ್ರವೇಶ ಕಾರಣ | ಶೀಘ್ರ ನಿರ್ಣಯ ಸಾಧ್ಯತೆ

# ಎಲ್ಲ ಅರ್ಹ ವಯಸ್ಕರಿಗೂ ಶೀಘ್ರದಲ್ಲೇ ಬೂಸ್ಟರ್ ಡೋಸ್?

**ನವದೆಹಲಿ:** ವಿಶ್ವದ ವಿವಿಧ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಎಲ್ಲ ಅರ್ಹ ವಯಸ್ಕರಿಗೂ ಕೋವಿಡ್ ಲಸಿಕೆಯ ಬೂಸ್ಟರ್ ಡೋಸುಗಳನ್ನು ಒದಗಿಸುವ ಕುರಿತು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.



ಪ್ರಸ್ತುತ ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಮಾತ್ರ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. ಇಸ್ರೇಲಿನಂತಹ ಕೆಲವು ದೇಶಗಳಿಗೆ ಪ್ರಯಾಣಿಸಲು ಬೂಸ್ಟರ್ ಡೋಸ್ ಕಡ್ಡಾಯಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯರು ವಿದೇಶಗಳಿಗೆ ಪ್ರಯಾಣಿಸಲು ಕಷ್ಟವಾಗುತ್ತಿದೆ. ಹೀಗಾಗಿ ಎಲ್ಲ ಅರ್ಹ ವಯಸ್ಕರಿಗೂ ಉಚಿತವಾಗಿ ಬೂಸ್ಟರ್ ಡೋಸನ್ನು ಒದಗಿಸುವ ಕುರಿತು ಸರ್ಕಾರ ಚರ್ಚೆ ನಡೆಸಿದೆ.

ಆದರೆ ಇದರ ಬಗ್ಗೆ ಇನ್ನೂ ಯಾವುದೇ ನಿರ್ಣಯ ತೆಗೆದುಕೊಳ್ಳಲಾಗಿಲ್ಲ. ಶೀಘ್ರದಲ್ಲೇ ಸಂಸತ್ತಿನಲ್ಲಿ ಈ ಕುರಿತು ನಿರ್ಣಯ ಪ್ರಕಟಿಸುವ ಸಾಧ್ಯತೆ ಇದೆ.

ಅಮೆರಿಕ, ಯುರೋಪ್ ಹಾಗೂ ಏಷ್ಯಾದ ಹಲವಾರು ದೇಶಗಳಲ್ಲಿ ಕೋವಿಡ್ ಸಂಖ್ಯೆ ಹೆಚ್ಚುತ್ತಿದ್ದರೂ ಭಾರತದಲ್ಲಿ ಸಾರ್ವಕಾಲಿಕ ಕನಿಷ್ಠ ಕೋವಿಡ್ ಪ್ರಕರಣಗಳು ದಾಖಲಾಗುತ್ತಿವೆ. ಈಗಾಗಲೇ 181.39 ಜನರಿಗೆ 2 ಡೋಸ್ ನೀಡಲಾಗಿದೆ. ಇದರಲ್ಲಿ 2 ಕೋಟಿ ಬೂಸ್ಟರ್ ಡೋಸ್.

## ಒಮಿಕ್ರೋನ್ ಅಂತ್ಯ ಅಲ್ಲ, ಸೌಮ್ಯವೂ ಅಲ್ಲ

### ಪರೀಕ್ಷೆ ಪ್ರಮಾಣ, ಲಸಿಕಾಕರಣ ಹೆಚ್ಚಿಸಿ: ಡಬ್ಲ್ಯುಎಚ್‌ಒ ಸಲಹೆ

**ನವದೆಹಲಿ:** ಒಮಿಕ್ರೋನ್ ಸೌಮ್ಯವಾದದ್ದು, ಇದೇ ಕೊರೋನಾದ ಕೊನೆಯ ತಳಿ ಮೊದಲಾದ ತಪ್ಪು ಕಲ್ಪನೆಗಳ ಕಾರಣದಿಂದಾಗಿ ಸರ್ಕಾರಗಳು ಕೋವಿಡ್ ಪರೀಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿವೆ. ಇದು ಸೋಂಕು ಹೆಚ್ಚಲು ಕಾರಣವಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತ ಪಡಿಸಿದೆ. 'ಒಮಿಕ್ರೋನ್‌ನೊಂದಿಗೆ ಕೋವಿಡ್ ಅಂತ್ಯಗೊಳ್ಳುತ್ತದೆ ಎಂದು ಜನ ತಿಳಿದುಕೊಂಡಿದ್ದಾರೆ. ಇದರಿಂದಾಗಿ ಸರ್ಕಾರಗಳು ಕೋವಿಡ್ ಪರೀಕ್ಷೆಯ ಪ್ರಮಾಣ ಇಳಿಕೆ ಮಾಡುತ್ತಿವೆ. ಹೀಗಾಗಿ ಕಳೆದ ಒಂದೇ ವಾರ ಜಗತ್ತಿನಾದ್ಯಂತ 1.1 ಕೋಟಿ ಹೊಸ ಪ್ರಕರಣಗಳು ವರದಿಯಾಗಿವೆ. ಹೀಗಾಗಿ ಕೋವಿಡ್ ಪರೀಕ್ಷೆಯ ಪ್ರಮಾಣ ಹೆಚ್ಚಿಸಬೇಕು. ಜನರು ಕಡ್ಡಾಯವಾಗಿ ಲಸಿಕೆ ಪಡೆದುಕೊಳ್ಳಬೇಕು' ಎಂದು ಕೊರೋನಾದ ಡಬ್ಲ್ಯುಎಚ್‌ಒದ ಕೋವಿಡ್ ತಾಂತ್ರಿಕ ಮುಖ್ಯಸ್ಥೆ ಮಾರಿಯಾ ವಾನ್ ಕೆರ್ಕೋವ್ ಸಲಹೆ ನೀಡಿದ್ದಾರೆ.

## ಕೋವಿಡ್ ಪರಿಹಾರಕ್ಕಾಗಿ ನಕಲಿ ದಾಖಲೆ, ಅಧಿಕಾರಿಗಳೂ ಸಾಥ್

- ಸುಪ್ರೀಂಕೋರ್ಟ್‌ಗೆ ಕೇಂದ್ರದ ಮಾಹಿತಿ
- ದಾಖಲೆಗಳ ಮಾದರಿ ಪರೀಕ್ಷೆಗೆ ಅನುಮತಿ ಕೋರಿಕೆ

**ನವದೆಹಲಿ:** ಕೋವಿಡ್‌ನಿಂದ ಸಾವಿಗೀಡಾದವರಿಗೆ ಸರ್ಕಾರ ನೀಡುತ್ತಿರುವ 50 ಸಾವಿರ ಪರಿಹಾರ ಪಡೆದುಕೊಳ್ಳುವುದಕ್ಕಾಗಿ ಕೆಲವು ನಿರ್ಲಜ್ಜರು ನಕಲಿ ದಾಖಲಾತಿಗಳನ್ನು ಸಲ್ಲಿಕೆ ಮಾಡಿದ್ದಾರೆ. ಈ ರೀತಿಯ ನಕಲಿ ದಾಖಲೆಗಳನ್ನು ಸಲ್ಲಿಕೆ ಮಾಡಿ ಹಣ ಪಡೆದುಕೊಳ್ಳಲು ಅಧಿಕಾರಿಗಳೂ ಸಾಥ್ ನೀಡಿದ್ದಾರೆ ಎಂದು ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದೆ. ಇದೇ ವೇಳೆ ಸಲ್ಲಿಕೆಯಾಗಿರುವ ಅರ್ಜಿಗಳ ಪೈಕಿ ಕೆಲ ಅರ್ಜಿಗಳನ್ನು ತನಿಖೆ ನಡೆಸಲು ಕೇಂದ್ರದ ಏಜೆನ್ಸಿಗಳಿಗೆ ಅನುಮತಿ ನೀಡಬೇಕು ಎಂದು ಸರ್ಕಾರ ಕೋರ್ಟ್‌ಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದೆ.

## 1549 ಕೇಸ್, 31 ಸಾವು: ಸಕ್ರಿಯ ಕೇಸ್ 25 ಸಾವಿರ

**ನವದೆಹಲಿ:** ಭಾರತದಲ್ಲಿ ಸೋಮವಾರ ಬೆಳಗ್ಗೆ 8 ಗಂಟೆಗೆ ಕೊನೆಗೊಂಡ 24 ತಾಸುಗಳ ಅವಧಿಯಲ್ಲಿ 1,549 ಕೊರೋನಾ ಪ್ರಕರಣಗಳು ಪತ್ತೆಯಾಗಿವೆ. ಇದು ಸಾರ್ವಕಾಲಿಕ ಕನಿಷ್ಠ ಪ್ರಮಾಣವಾಗಿದೆ. ಇದೇ ವೇಳೆ 31 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 4.30 ಕೋಟಿಗೆ ಏರಿಕೆಯಾಗಿದೆ. ಒಟ್ಟು ಸಾವಿಗೀಡಾದವರ ಸಂಖ್ಯೆ 5.16 ಲಕ್ಷಕ್ಕೆ ತಲುಪಿದೆ. ಹೊಸ ಸೋಂಕಿತರೂ ಸೇರಿ ಸಕ್ರಿಯ ಸೋಂಕಿನ ಪ್ರಮಾಣ 25,106ಕ್ಕೆ ಇಳಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ.98.74ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ.0.40 ಇದೆ.

# ಆಗಸ್ಟ್‌ಗೆ 4ನೇ ಅಲೆ, ಆತಂಕವಿಲ್ಲ

ಕೋವಿಡ್ 4ನೇ ಅಲೆ ಈಗಾಗಲೇ 40 ರಾಷ್ಟ್ರಗಳಲ್ಲಿ ಕಾಣಿಸಿಕೊಂಡಿದ್ದು, ದೇಶದಲ್ಲಿ ಆಗಸ್ಟ್ ವೇಳೆಗೆ ಸೋಂಕು ಹೆಚ್ಚಾಗುವ ಸಾಧ್ಯತೆ ಇದೆ ಎಂಬುದು ತಜ್ಞರ ಸಮಿತಿ ಅಂದಾಜಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸೋಮವಾರ ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಶೂನ್ಯವೇಳೆಯಲ್ಲಿ ಬಿಜೆಪಿ ಸದಸ್ಯ ಶಶಿಲ್ ನಮೋಶಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿ, ''ಬಿಎ-2 ಎನ್ನುವ ಪ್ರಬೇಧದ ಸೋಂಕು ಮೊದಲ ಬಾರಿಗೆ ಫಿಲಿಫೈನ್ಸ್‌ನಲ್ಲಿ ಕಾಣಿಸಿಕೊಂಡಿತ್ತು. ಅದು ಕೋವಿಡ್ 4ನೇ ಅಲೆ ಉಂಟು ಮಾಡಲಿದೆ ಎಂದು ಹೇಳಲಾಗುತ್ತಿದ್ದು, ಈ ಮೊದಲು ಸೋಂಕಿನ ತೀವ್ರತೆಯ ಬಗ್ಗೆ ಅಂದಾಜು ಮಾಡಿದ್ದ ಐಐಟಿ ಕಾನ್ಪುರ 4ನೇ ಅಲೆ ಆಗಸ್ಟ್ ವೇಳೆಗೆ ದೇಶದಲ್ಲಿ ಉಂಟಾಗಬಹುದೆಂದು ಅಂದಾಜು ಮಾಡಿದೆ,'' ಎಂದರು.

''ಮುಖ್ಯಮಂತ್ರಿ ಕೂಡ ಸದ್ಯದಲ್ಲೇ ಸಭೆ ನಡೆಸಲಿದ್ದಾರೆ. ಮಾಸ್ಕ್ ಧಾರಣೆ ಕಡ್ಡಾಯದ ಬಗ್ಗೆ ತಜ್ಞರು ಶಿಫಾರಸು ಮಾಡಿದ್ದಾರೆ. ಆ ಬಗ್ಗೆ ಚರ್ಚೆ ನಡೆಸಿ ತೀರ್ಮಾನಿಸಲಾಗುವುದು. ಆದರೆ ಲಸಿಕೀಕರಣ ಗರಿಷ್ಠ ಪ್ರಮಾಣದಲ್ಲಿ ಆಗಿರುವುದರಿಂದ ಹೆಚ್ಚಿನ ತೊಂದರೆ ಆಗುವುದಿಲ್ಲ. ರಾಜ್ಯದಲ್ಲಿ 4.97 ಕೋಟಿ ಮಂದಿಗೆ ಮೊದಲ ಡೋಸ್ ಮತ್ತು 4.69 ಕೋಟಿ ಮಂದಿಗೆ 2ನೇ ಡೋಸ್ ನೀಡಲಾಗಿದೆ. 12ವರ್ಷ ಮೇಲ್ಪಟ್ಟ ಮಕ್ಕಳಿಗೂ ಲಸಿಕೆ ನೀಡಿಕೆ ಆರಂಭವಾಗಿದೆ. 18 ವರ್ಷದೊಳಗಿನ 1.25 ಕೋಟಿ ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಬಹುತೇಕರು ಲಸಿಕೆ ಹಾಕಿಸಿಕೊಂಡಿರುವುದರಿಂದ ಹೊಸ ಸೋಂಕಿಗೆ ಹೆದರಬೇಕಾಗಿಲ್ಲ. ಜನರು ಆತಂಕ ಪಡಬಾರದು, ಆದರೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು,'' ಎಂದು ಹೇಳಿದರು.

''ಸಂಭಾವ್ಯ 4 ಅಲೆ ತಡೆಗೆ ಸದ್ಯ 55,256 ಆಮ್ಲಜನಕ ಹಾಸಿಗೆಗಳಿವೆ. ಆಮ್ಲಜನಕ ಸಾಮರ್ಥ್ಯ ಸಹ 300 ಮೆಟ್ರಿಕ್‌ಟನ್‌ನಿಂದ 1170 ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗಿದೆ. ಜೊತೆಗೆ ಆಮ್ಲಜನಕದ ದಾಸ್ತಾನು ಸಾಮರ್ಥ್ಯ ಹೆಚ್ಚಿಸಲಾಗಿದೆ. ಪರೀಕ್ಷಾ ಸಾಮರ್ಥ್ಯ ಕೂಡ 2.5ಲಕ್ಷಕ್ಕೆ ವೃದ್ಧಿಯಾಗಿದೆ,'' ಎಂದರು.



## ಲಸಿಕೆಗೆ ಹಿಂಜರಿಕೆ ಇದೆ

''12 ವರ್ಷ ಮೇಲ್ಪಟ್ಟ ಮಕ್ಕಳಲ್ಲಿ ಲಸಿಕೆ ಪಡೆಯಲು ಸ್ವಲ್ಪ ಹಿಂಜರಿಕೆ ಕಂಡು ಬರುತ್ತಿದೆ. ಮಕ್ಕಳು ಮತ್ತು ಪೋಷಕರಿಗೆ ಜಾಗೃತಿ ಕಾರ್ಯವೂ ನಡೆದಿದೆ,'' ಎಂದು ಸಚಿವರು ಹೇಳಿದರು.

## ಮುಂದಿನ ವರ್ಷದಿಂದ ಇಡಬ್ಲ್ಯುಎಸ್ ಜಾರಿ

ವೈದ್ಯಕೀಯ ಮತ್ತು ಉನ್ನತ ಶಿಕ್ಷಣದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗ (ಇಡಬ್ಲ್ಯುಎಸ್ ) ಕೋಟಾದಡಿ ಶೇ.10ರಷ್ಟು ಸೀಟುಗಳನ್ನು ಕಾಯ್ದಿರಿಸುವುದನ್ನು ಮುಂಬರುವ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು. ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ.ವೆಂಕಟೇಶ್ ಅವರ ಪ್ರಶ್ನೆಗೆ, ''ಕೇಂದ್ರ ಸರಕಾರ ಇಡಬ್ಲ್ಯುಎಸ್ ಕೋಟಾ ಜಾರಿಗೊಳಿಸಿದ್ದರೂ ರಾಜ್ಯದಲ್ಲಿ ಇನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಸದ್ಯದಲ್ಲೇ ಉನ್ನತ ಶಿಕ್ಷಣ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬರುವ ಶೈಕ್ಷಣಿಕ ವರ್ಷದಿಂದಲೇ ಶೇ.10ರಷ್ಟು ಆರ್ಥಿಕವಾಗಿ ಹಿಂದುಳಿದ ವರ್ಗದ ಕೋಟಾ ಜಾರಿಗೊಳಿಸಲಾಗುವುದು,'' ಎಂದರು.

## ಪಾದಚಾರಿ ಸುರಂಗ ಮಾರ್ಗದಲ್ಲಿ ಮಳೆ ನೀರು ನಿಂತಿದ್ದರಿಂದ ರಸ್ತೆ ದಾಟುತ್ತಿದ್ದಾಗ ದುರ್ಘಟನೆ

# ಕಸದ ಲಾರಿ ಗುದ್ದಿ ವಿದ್ಯಾರ್ಥಿನಿ ಸಾವು

■ **ವಿಕ ಸುದ್ದಿಲೋಕ** ಬೆಂಗಳೂರು

ಅಜಾಗರೂಕತೆಯಿಂದ ಅತಿ ವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿ, ಮುಂದೆ ಚಲಿಸುತ್ತಿದ್ದ ಕಾರು ಹಾಗೂ ದ್ವಿಚಕ್ರ ವಾಹನಕ್ಕೆ ಗುದ್ದಿದ ಬಳಿಕ ರಸ್ತೆ ದಾಟುತ್ತಿದ್ದ ಶಾಲಾ ವಿದ್ಯಾರ್ಥಿನಿಗೂ ಡಿಕ್ಕಿ ಹೊಡೆದು ಆಕೆ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಆರ್.ಟಿ. ನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಿಎಂಟಿಸಿ ಬಸ್ ನಿರ್ವಾಹಕ ನರಸಿಂಹಮೂರ್ತಿ ಪುತ್ರಿ ಅಕ್ಷಯಾ (14) ಮೃತ ಬಾಲಕಿ. ಇನ್ನು ಬಸ್ ಗುದ್ದಿದ ರಭಸಕ್ಕೆ ಪಾದಚಾರಿ ಸೌಮ್ಯ (28), ದ್ವಿಚಕ್ರ ವಾಹನ ಸವಾರ ಸಹಕಾರ ನಗರದ ವಿಕಾಸ್ (42) ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದರು.

ಸೋಮವಾರ ಬಳ್ಳಾರಿ ಮುಖ್ಯ ರಸ್ತೆಯ ಹೆಬ್ಬಾಳ ಪೊಲೀಸ್ ಠಾಣೆ ಸಮೀಪದ ಸುರಂಗ ಮಾರ್ಗದಲ್ಲಿ ಮಳೆ ನೀರು ತುಂಬಿದ್ದ ಪರಿಣಾಮ ವಿದ್ಯಾರ್ಥಿಗಳಾದ ಅಕ್ಷಯಾ, ಆಕೆಯ ತಂಗಿ ಸಂಧ್ಯಾ ಹಾಗೂ ಪಾದಚಾರಿ ಸೌಮ್ಯಾ ರಸ್ತೆ ವಿಭಜಕವನ್ನು ದಾಟುತ್ತಿದ್ದರು. ಈ ವೇಳೆ ಠಾಣೆ ಎದುರಿನ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ. ಅಜಾಗರೂಕತೆಯಿಂದ ಬಿಬಿಎಂಪಿ ಕಸದ ಲಾರಿ ಚಲಾಯಿಸಿಕೊಂಡು ಬಂದು ಅಪಘಾತವೆಸಗಿದ ಚಾಲಕ ಚಿಕ್ಕಬಳ್ಳಾಪುರದ ಮಂಜುನಾಥ್ (36)ನನ್ನು ಬಂಧಿಸಿ, ಲಾರಿ ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಉತ್ತರ ಸಂಚಾರ ವಿಭಾಗದ ಡಿಸಿಪಿ ಎಸ್. ಸವಿತಾ ಹೇಳಿದರು.

**ಇಬ್ಬರಿಗೆ ತೀವ್ರ ಗಾಯ**

**ಬಿಬಿಎಂಪಿ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ**

**ಪರೀಕ್ಷೆ ಬರೆದು ಮನೆಗೆ ವಾಪಸ್ ಆಗುವಾಗ ನಡೆದ ದುರ್ಘಟನೆ**



ನೀರು ತುಂಬಿದ ಅಂಡರ್ ಪಾಸ್‌ನಲ್ಲಿ ಸಾಗಲು ಹರಸಾಹಸ.

**ಪುತ್ರಿಯನ್ನು ಕಳೆದುಕೊಂಡ ಕಂಡಕ್ಟರ್:** ಬಿಎಂಟಿಸಿ ಬಸ್ ನಿರ್ವಾಹಕರಾಗಿರುವ ಮಧುಗಿರಿ ಮೂಲದ ನರಸಿಂಹ ಮೂರ್ತಿ ಹೆಣ್ಣೂರು ಡಿಪೋದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಪತ್ನಿ ಗೀತಾ ಹಾಗೂ ಕುಟುಂಬದ ಜತೆ ಹೆಬ್ಬಾಳದ ಕುಂತಿಗ್ರಾಮದ 'ಸಿ' ಬ್ಲಾಕ್‌ನಲ್ಲಿ ವಾಸವಾಗಿದ್ದಾರೆ. ಈ ದಂಪತಿಗೆ ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರನಿದ್ದು, ಸೋಮವಾರ ನಡೆದ ಅಪಘಾತದಲ್ಲಿ ಪುತ್ರಿ ಅಕ್ಷಯಾ ಮೃತಪಟ್ಟಿದ್ದಾರೆ. ನರಸಿಂಹ ಮೂರ್ತಿ ತನ್ನ ಪುತ್ರಿ ಅಕ್ಷಯಾಳನ್ನು ವೈಯಾಲಿಕಾವಲ್‌ನ ಸ್ಟೆಲ್ಲಾ ಮೇರಿಸ್ ಶಾಲೆಗೆ ಸೇರಿಸಿದ್ದು, 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಬಸ್ ಪಾಸ್ ಹೊಂದಿದ್ದ ವಿದ್ಯಾರ್ಥಿನಿ ನಿತ್ಯ ಬಿಎಂಟಿಸಿ ಬಸ್‌ನಲ್ಲಿ ಓಡಾಡುತ್ತಿದ್ದರು. ಅಕ್ಷಯಾ ಸೋಮವಾರ ಪರೀಕ್ಷೆ ಬರೆದು ಮನೆಗೆ ತೆರಳಲೆಂದು ಸದಾಶಿವನಗರದಿಂದ ಬಂದು ಹೆಬ್ಬಾಳ ಬಸ್ ನಿಲ್ದಾಣದಿಂದ ಹೆಬ್ಬಾಳ ಪೊಲೀಸ್ ಠಾಣೆ ಕಡೆಗೆ ರಸ್ತೆ ದಾಟುತ್ತಿದ್ದಾಗ ದುರ್ಘಟನೆ ಸಂಭವಿಸಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಯಲಹಂಕ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದ್ದು, ಬಳಿಕ ಪೋಷಕರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

**ಸರಣಿ ಅಪಘಾತ :** ಮೇಖ್ರಿ ವೃತ್ತದಿಂದ ಅತಿ ವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿ, ಮುಂದೆ ಚಲಿಸುತ್ತಿದ್ದ ಕಾರು ಹಾಗೂ ದ್ವಿಚಕ್ರ ವಾಹನಕ್ಕೆ ಗುದ್ದಿದೆ. ಬಳಿಕ ಬ್ರೇಕ್ ಹಾಕಿದ್ದರೂ ಅತಿವೇಗದಲ್ಲಿದ್ದ ಲಾರಿ ಮುಂದಕ್ಕೆ ಉಜ್ಜಿಕೊಂಡು ಹೋಗಿ ರಸ್ತೆ ದಾಟುತ್ತಿದ್ದ ಅಕ್ಷಯಾಗೆ ಗುದ್ದಿದೆ. ಕೆಳಗೆ ಬಿದ್ದ ಅಕ್ಷಯಾ ತಲೆ ಮೇಲೆ ಲಾರಿಯ ಹಿಂದಿನ ಚಕ್ರ ಹತ್ತಿದೆ. ಅಲ್ಲದೇ, ಮತ್ತೊಬ್ಬ ಪಾದಚಾರಿ ಸೌಮ್ಯ ಎಂಬುವವರಿಗೂ ಗುದ್ದಿದ್ದು, ಅವರ ಸ್ಥಿತಿಯೂ ಗಂಭೀರವಾಗಿದೆ. ಸದ್ಯ ಮೃತ ಬಾಲಕಿ ತಾಯಿ ಗೀತಾ ನರಸಿಂಹ ಮೂರ್ತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಿ, ತನಿಖೆ ಕೈಗೊಳ್ಳಲಾಗಿದೆ.



ಅಂಡರ್‌ಪಾಸ್‌ನಲ್ಲಿ ನೀರು ತುಂಬಿರುವ ಬಗ್ಗೆ ಪೊಲೀಸರು ಬಿಬಿಎಂಪಿಗೆ ಮಾಹಿತಿ ಕೊಟ್ಟಿದ್ದರೂ ಕ್ರಮ ಕೈಗೊಳ್ಳಲಿಲ್ಲ. ಪ್ರಕರಣದ ಬಗ್ಗೆ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಎಸ್. ಸವಿತಾ,**
ಡಿಸಿಪಿ, ಉತ್ತರ ಸಂಚಾರ ವಿಭಾಗ



ಅಕ್ಷಯಾ





ಬಂಧಿತ ಚಾಲಕ

### ಶಾಸಕರಿಂದ 2 ಲಕ್ಷ ರೂ.ಪರಿಹಾರ

ವಿದ್ಯಾರ್ಥಿನಿ ಅಕ್ಷಯಾ ಮೃತಪಟ್ಟ ಹಿನ್ನೆಲೆಯಲ್ಲಿ ಆಕೆಯ ಪೋಷಕರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಶಾಸಕ ಬೈರತಿ ಸುರೇಶ್, ಸ್ವ-ಇಚ್ಛೆಯಿಂದ ಎರಡು ಲಕ್ಷ ರೂ. ಪರಿಹಾರ ನೀಡಿದ್ದಾರೆ. ಅಲ್ಲದೇ, ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದ್ದಾರೆ.

### ಅರ್ಧ ಸಂಬಳಕ್ಕೆ ವ್ಯಾನ್ ಶುಲ್ಕ ಭರಿಸಲಾಗುತ್ತಿರಲಿಲ್ಲ

ಕೊರೊನಾ ಸಂಕಷ್ಟಕ್ಕೆ ಸಿಲುಕಿದ ಸಾರಿಗೆ ಇಲಾಖೆ ಇತ್ತೀಚೆಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಸಾರಿಗೆ ನೌಕರರಿಗೆ ಪ್ರತಿ ತಿಂಗಳು ಅರ್ಧ ಸಂಬಳ ನೀಡುತ್ತಿದೆ. ಈ ಅರ್ಧ ಸಂಬಳ ಮನೆ ಬಾಡಿಗೆ, ಸಂಸಾರ ನಿರ್ವಹಣೆಗಷ್ಟೇ ಸಾಕಾಗುತ್ತಿತ್ತು. ತನ್ನ ಪುತ್ರಿಗೆ ಸಾಲ ಮಾಡಿ ಶಾಲೆ ಶುಲ್ಕ ಕಟ್ಟಲಾಗಿತ್ತು. ವಿದ್ಯಾರ್ಥಿಗಳನ್ನು ಶಾಲೆಗೆ ಕರೆದೊಯ್ಯುವ ವ್ಯಾನ್‌ಗಳಿಗೆ ಹಣ ನೀಡಲಾಗದ ಕಾರಣ ಬಸ್ ಪಾಸ್ ಕೊಡಿಸಿ ನಿತ್ಯ ಬಿಎಂಟಿಸಿ ಬಸ್‌ನಲ್ಲೇ ಶಾಲೆಗೆ ಹೋಗುವಂತೆ ಹೇಳಿದ್ದೆ. ಹೀಗಾಗಿ, ತನ್ನ ಆರ್ಥಿಕ ಸಂಕಷ್ಟ ಸ್ಥಿತಿಯೂ ಪುತ್ರಿಯ ಸಾವಿಗೆ ಕಾರಣವಾಗಿದೆ ಎಂದು ಮೃತ ಅಕ್ಷಯಾ ತಂದೆ ನರಸಿಂಹಮೂರ್ತಿ ಅಳಲು ತೋಡಿಕೊಂಡಿದ್ದಾರೆ.

### ಬಿಬಿಎಂಪಿ ನಿರ್ಲಕ್ಷ್ಯ

ರಾತ್ರಿ ಸುರಿದ ಮಳೆಗೆ ಸುರಂಗ ಮಾರ್ಗದೊಳಗೆ ನೀರು ತುಂಬಿರುವುದನ್ನು ತೆರವು ಮಾಡುವಂತೆ ಸೋಮವಾರ ಮುಂಜಾನೆಯೇ ಹೆಬ್ಬಾಳ ಠಾಣೆ ಪೊಲೀಸರು ಬಿಬಿಎಂಪಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಅಲ್ಲದೇ, ಸಹಾಯವಾಣಿಗೂ ಕರೆ ಮಾಡಿ ದೂರು ನೀಡಿದ್ದಾರೆ. ಜತೆಗೆ ಸಾರ್ವಜನಿಕರು ಕೂಡ ನೀರು ತೆರವು ಮಾಡುವಂತೆ ದೂರು ನೀಡಿದ್ದಾರೆ. ಇಷ್ಟಾದರೂ ಬಿಬಿಎಂಪಿ ಅಧಿಕಾರಿಗಳು ಮತ್ತು ಸಿಬ್ಬಂದಿ ನೀರು ತೆರವು ಮಾಡದೆ ನಿರ್ಲಕ್ಷ್ಯ ವಹಿಸಿದ್ದರು. ಪರಿಣಾಮ ಅಮಾಯಕಿ ಬಾಲಕಿ ಜೀವ ಬಲಿಯಾಗಿದೆ.

### ಸುರಂಗ ಮಾರ್ಗದಲ್ಲಿ ನೀರು

ಹೆಬ್ಬಾಳ ಬಸ್ ನಿಲ್ದಾಣದಿಂದ ಪೊಲೀಸ್ ಠಾಣೆ ಕಡೆಗೆ ಸಾರ್ವಜನಿಕರು ಸುಗಮವಾಗಿ ರಸ್ತೆ ದಾಟಲೆಂದು ಸುರಂಗ ಮಾರ್ಗ ನಿರ್ಮಿಸಲಾಗಿದೆ. ಆದರೆ, ಭಾನುವಾರ ಸುರಿದ ಮಳೆಯಿಂದ ಸುರಂಗ ಮಾರ್ಗದಲ್ಲಿ ನೀರು ತುಂಬಿತ್ತು. ಹೀಗಾಗಿ, ಜನರು ಸುರಂಗ ಮಾರ್ಗ ಬಳಸಲಾಗದೆ ರಸ್ತೆ ಮೂಲಕವೇ ದಾಟುತ್ತಿದ್ದರು. ಸೋಮವಾರ ಮಧ್ಯಾಹ್ನದ ವರೆಗೂ ಸುರಂಗ ಮಾರ್ಗದೊಳಗೆ ತುಂಬಿದ್ದ ನೀರು ತೆರವು ಮಾಡಿರಲಿಲ್ಲ. ಸೋಮವಾರ ಮಧ್ಯಾಹ್ನ ಸುಮಾರು 12.30ಕ್ಕೆ ಶಾಲೆ ವಿದ್ಯಾರ್ಥಿಗಳು ಹೆಬ್ಬಾಳ ಬಸ್ ನಿಲ್ದಾಣದ ಕಡೆಯಿಂದ ಪೊಲೀಸ್ ಠಾಣೆ ಕಡೆಗೆ ರಸ್ತೆ ದಾಟುತ್ತಿದ್ದರು. ಈ ವೇಳೆ ಕೊನೆಯಲ್ಲಿ ರಸ್ತೆ ದಾಟುತ್ತಿದ್ದ ಅಕ್ಷಯಾಗೆ ಲಾರಿ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ವಿವರಿಸಿದರು.

| 2019 -5 | ಕಸದ ವಾಹನದಿಂದ ನಡೆದ ಅಪಘಾತಗಳು |
|---|---|
| 2020-3 | 2021-8 |



### ಪೈಲಟ್ ಕನಸು ಕಂಡಿದ್ದ ಕಂಡಕ್ಟರ್ ಪುತ್ರಿ

ಅಕ್ಷಯಾ ಚಿಕ್ಕ ವಯಸ್ಸಿನಿಂದಲೂ ತಾನು ಪೈಲಟ್ ಆಗಬೇಕು ಎಂಬ ಕನಸು ಹೊತ್ತಿದ್ದರು. ಆ ನಿಟ್ಟಿನಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ್ದರು. ಬಾಲಕಿಯ ಕನಸಿಗೆ ಪೋಷಕರು ಪ್ರೋತ್ಸಾಹ ನೀಡುತ್ತಿದ್ದರು. ಅಲ್ಲದೇ, ಅರ್ಧ ಸಂಬಳ ಪಡೆದು ಜೀವನ ನಿರ್ವಹಣೆಗೂ ಹೆಣಗಾಡುತ್ತಿದ್ದ ತಂದೆಯ ಪರಿಸ್ಥಿತಿಯನ್ನು ನೋಡುತ್ತಿದ್ದ ಅಕ್ಷಯಾ ತಾನು ಪೈಲಟ್ ಆದ ನಂತರ ನಿಮ್ಮ ಎಲ್ಲ ಕಷ್ಟಗಳು ನೀಗಲಿವೆ. ಧೈರ್ಯದಿಂದ ಬದುಕು ಎದುರಿಸೋಣ ಎಂದು ತಂದೆಗೆ ಧೈರ್ಯ ತುಂಬುತ್ತಿದ್ದರು. ಈ ಎಲ್ಲ ಮಾತನ್ನು ನೆನೆದು ನರಸಿಂಹ ಮೂರ್ತಿ ಕಣ್ಣೀರಾದರು.

## ತನಿಖಾ ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ಅಪಘಾತ ನಡೆದ ಸ್ಥಳಕ್ಕೆ ಸ್ಥಳೀಯ ಶಾಸಕ ಬೈರತಿ ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಭೇಟಿ ನೀಡಿ ಪರಿಶೀಲಿಸಿದರು.



ಈ ವೇಳೆ ಮಾತನಾಡಿದ ಗೌರವ್ ಗುಪ್ತ, ''ಬಳ್ಳಾರಿ ರಸ್ತೆಯು ನಿತ್ಯ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಗಂಟೆಗೆ 30 ಸಾವಿರ ವಾಹನಗಳು ಸಂಚರಿಸುತ್ತವೆ. ನಿಲ್ದಾಣದ ಸನಿಹದಲ್ಲೇ ಸ್ಕೈವಾಕ್, ಪಾದಚಾರಿ ಸುರಂಗ ಮಾರ್ಗವಿದೆ. ಆದರೂ, ಮೂವರು 3 ಅಡಿ ಎತ್ತರದ ರಸ್ತೆ ವಿಭಜಕ ದಾಟುವಾಗ ಅಪಘಾತ ಸಂಭವಿಸಿದೆ,'' ಎಂದು ಹೇಳಿದರು.

''ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಂತದ್ದು ಗಮನಕ್ಕೆ ಬಂದಿದೆ. ಮಳೆ ಬಂದಾಗ ಕೊಂಚ ನೀರು ನಿಲ್ಲುವುದು ಸಹಜ. ಆದರೆ, ಜನರು ಸ್ಕೈವಾಕ್, ಪಾದಚಾರಿ ಸುರಂಗ ಮಾರ್ಗ ಬಳಸದೆ ಅಪಾಯ ತಂದುಕೊಳ್ಳುವುದು ಸರಿಯಲ್ಲ. ಜನರು ರಸ್ತೆ ದಾಟುವುದನ್ನು ತಪ್ಪಿಸಲು ವಿಭಜಕದ ಎತ್ತರವನ್ನು ಇನ್ನೂ ಒಂದೂವರೆ ಅಡಿಯಷ್ಟು ಎತ್ತರಿಸಲಾಗುವುದು. ಅಪಘಾತದ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ವರದಿ ಬಂದ ಬಳಿಕ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು,'' ಎಂದು ತಿಳಿಸಿದರು.

### ಸ್ಕೈವಾಕ್, ಪಾದಚಾರಿ ಸುರಂಗ ಬಳಸಲು ಹಿಂದೇಟು

ನಗರದ ಹಲವು ಪ್ರಮುಖ ರಸ್ತೆಗಳು, ಜಂಕ್ಷನ್‌ಗಳಲ್ಲಿ ಪಾದಚಾರಿಗಳ ಸುಗಮ ಓಡಾಟಕ್ಕೆ ಅನುವಾಗುವಂತೆ ಸ್ಕೈವಾಕ್‌ಗಳು ಹಾಗೂ ಸುರಂಗ ಮಾರ್ಗಗಳನ್ನು ಕೋಟ್ಯಂತರ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಆದರೆ, ಬಹುತೇಕರು ಸ್ಕೈವಾಕ್ ಮತ್ತು ಸುರಂಗ ಮಾರ್ಗ ಬಳಸುತ್ತಿಲ್ಲ. ವೇಗವಾಗಿ ಬರುವ ವಾಹನಗಳ ನಡುವೆಯೇ ನುಸುಳಿಕೊಂಡು ರಸ್ತೆ ದಾಟುವುದು ಸರ್ವೇ ಸಾಮಾನ್ಯವಾಗಿದೆ. ಪಾಲಿಕೆ ನಿರ್ಮಿಸಿರುವ ಬಹುತೇಕ ಸ್ಕೈವಾಕ್‌ಗಳು ಪಾದಚಾರಿ ಸ್ನೇಹಿಯಾಗಿಲ್ಲ. ಇವು ಜಾಹೀರಾತು ಪ್ರದರ್ಶನಕ್ಕಷ್ಟೇ ಸೀಮಿತವಾಗಿವೆ. ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಖಾಸಗಿ ಸಂಸ್ಥೆಗಳೇ ಸ್ವಂತ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸುತ್ತಿವೆ. ಇದರಿಂದ ಪಾಲಿಕೆಗೆ ನೆಲ ಬಾಡಿಗೆ ಮತ್ತು ಜಾಹೀರಾತು ತೆರಿಗೆ ಸಂದಾಯವಾಗುತ್ತಿದೆ. ಹೀಗಾಗಿ, ಖಾಸಗಿ ಏಜೆನ್ಸಿಗಳು ಜಾಹೀರಾತು ಪ್ರದರ್ಶನಕ್ಕೆ ಅನುಕೂಲವಾಗುವಂತೆ ಸ್ಕೈವಾಕ್‌ಗಳನ್ನು ನಿರ್ಮಾಣ ಮಾಡುತ್ತಿವೆ ಎಂಬ ಆರೋಪಗಳಿವೆ. ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬಸವೇಶ್ವರ ವೃತ್ತ, ಪುರಭವನ ಮುಂಭಾಗ, ಕೆ.ಆರ್. ಮಾರುಕಟ್ಟೆ ಸೇರಿದಂತೆ ಹಲವೆಡೆ ಪಾಲಿಕೆಯು ಪಾದಚಾರಿ ಸುರಂಗ ಮಾರ್ಗಗಳನ್ನು ನಿರ್ಮಿಸಿದೆ. ಇವು ನಿರ್ವಹಣೆ ಕೊರತೆಯಿಂದ ಹದಗೆಟ್ಟು ಹೋಗಿದ್ದು, ದುರ್ನಾತ ಬೀರುತ್ತಿವೆ. ಮಳೆ ಬಂದಾಗ ನೀರು ತುಂಬಿಕೊಳ್ಳುತ್ತಿವೆ. ಇಲ್ಲಿ ಭದ್ರತಾ ಸಿಬ್ಬಂದಿಯೂ ಇಲ್ಲ. ಹಾಗಾಗಿ, ಸಾರ್ವಜನಿಕರು ರಸ್ತೆ ದಾಟಲು ಪಾದಚಾರಿ ಸುರಂಗ ಮಾರ್ಗಗಳನ್ನು ಬಳಸುತ್ತಿಲ್ಲ. ಕೋಟ್ಯಂತರ ರೂ. ಖರ್ಚು ಮಾಡಿ ನಿರ್ಮಿಸಿದ ಸುರಂಗ ಮಾರ್ಗಗಳು ನಿಷ್ಪ್ರಯೋಜಕವಾಗಿವೆ.

## ರಸ್ತೆ ದಾಟುತ್ತಿದ್ದವಳ ಮೇಲೆ ಹರಿದ ವಾಹನ | ಬಿಬಿಎಂಪಿ ನಿರ್ಲಕ್ಷ್ಯ ಆರೋಪ

# ಪಾಲಿಕೆ ಕಸದ ಲಾರಿಗೆ ಬಾಲಕಿ ಬಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹೆಬ್ಬಾಳ ಪೊಲೀಸ್ ಠಾಣೆ ಮುಂಭಾಗದಲ್ಲಿ ರಸ್ತೆ ದಾಟುತ್ತಿದ್ದ 14 ವರ್ಷದ ಬಾಲಕಿಗೆ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದು ಆಕೆಯ ಮೇಲೆ ಹರಿದ ಪರಿಣಾಮ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾಳೆ. ಅಪಘಾತದಲ್ಲಿ ಇನ್ನೂ ಮೂವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಸ್ತೆ ದಾಟಲು ನಿರ್ಮಿಸಿರುವ ಅಂಡರ್‌ಪಾಸ್‌ನಲ್ಲಿ ನೀರು ತುಂಬಿದ್ದರಿಂದ ಬಾಲಕಿ ರಸ್ತೆ ದಾಟಲು ಯತ್ನಿಸಿದಾಗ ದುರ್ಘಟನೆ ಸಂಭವಿಸಿದೆ. ಬಾಲಕಿ ಸಾವಿಗೆ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕಸದ ಲಾರಿ ಚಾಲಕನ ಅಜಾಗರೂಕ ವಾಹನ ಚಾಲನೆಯೇ ಕಾರಣವೆಂದು ಜನಾಕ್ರೋಶ ವ್ಯಕ್ತವಾಗಿದೆ.

ಬಳ್ಳಾರಿ ಮುಖ್ಯ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ 12.30ಕ್ಕೆ ಅವಘಡ ನಡೆದಿದೆ. ಹೆಬ್ಬಾಳ ಕುಂತಿಗ್ರಾಮದ ನಿವಾಸಿ ಅಕ್ಷಯಾ (14) ಮೃತಪಟ್ಟ ಬಾಲಕಿ. ಈಕೆಯ ಸಹೋದರಿ ಸಂಧ್ಯಾ (12), ಪಾದಚಾರಿ ಮಹಿಳೆ ಸೌಮ್ಯಾ (28) ಮತ್ತು ಸಹಕಾರನಗರದ ನಿವಾಸಿ ವಿಕಾಸ್



(49) ಗಂಭೀರವಾಗಿ ಗಾಯಗೊಂಡಿದ್ದಾರೆ. ಬಿಬಿಎಂಪಿ ಕಸದ ಲಾರಿ ಚಾಲಕ ಮಂಜುನಾಥ್ (35) ಎಂಬಾತನನ್ನು ಆರ್.ಟಿ. ನಗರ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

**ಆಗಿದ್ದೇನು?:** ಸ್ಟೆಲ್ಲಾ ಮೇರೀಸ್ ಇಂಗ್ಲಿಷ್ ಪ್ರೌಢಶಾಲೆಯಲ್ಲಿ ಅಕ್ಷಯಾ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಅದೇ ಶಾಲೆಯಲ್ಲಿ ಆಕೆಯ ಸಹೋದರಿ ಸಂಧ್ಯಾ ಸಹ ಓದುತ್ತಿದ್ದಾಳೆ. ಮಧ್ಯಾಹ್ನ ಶಾಲೆ ಬಿಟ್ಟ ಬಳಿಕ ಅಕ್ಕ-ತಂಗಿಯರು ಜತೆಯಾಗಿ ಮನೆಗೆ ವಾಪಸ್ ಆಗುತ್ತಿದ್ದರು. ರಸ್ತೆ ದಾಟಲು ನಿರ್ಮಿಸಿದ್ದ ಅಂಡರ್ ಪಾಸ್‌ನಲ್ಲಿ 3 ಅಡಿ ನೀರು ನಿಂತಿದ್ದ ಹಿನ್ನೆಲೆಯಲ್ಲಿ ಎಲ್ಲರೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆ ಮೂಲಕವೇ ದಾಟುತ್ತಿದ್ದರು. ಅಕ್ಷಯಾ, ಸಂಧ್ಯಾ ರಸ್ತೆ ದಾಟುತ್ತಿದ್ದಾಗ ಸೌಮ್ಯಾ ಸಹ ಇವರ ಪಕ್ಕದಲ್ಲಿ ಬರುತ್ತಿದ್ದರು. ಮೇಖ್ರಿ ವೃತ್ತದ ಕಡೆಯಿಂದ ಏರ್‌ಪೋರ್ಟ್ ಕಡೆಗೆ ಅಜಾಗರೂಕತೆಯಿಂದ ಅತಿ ವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿಯನ್ನು ಚಾಲಕ ನಿಯಂತ್ರಿಸಲಾಗದೆ ಮುಂದೆ ಹೋಗುತ್ತಿದ್ದ ಕಾರು ಹಾಗೂ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ. ಇದೇ ವೇಳೆ ರಸ್ತೆ ದಾಟುತ್ತಿದ್ದ ಪಾದಚಾರಿಗಳಿಗೂ ಲಾರಿ ಗುದ್ದಿದೆ. ಗುದ್ದಿದ ರಭಸಕ್ಕೆ ರಸ್ತೆಗೆ ಬಿದ್ದ ಅಕ್ಷಯಾ ಹೊಟ್ಟೆಯ ಭಾಗದ ಮೇಲೆ ಲಾರಿಯ ಚಕ್ರ ಹರಿದು ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾಳೆ.

ಗಾಯಗೊಂಡಿದ್ದ ಅಕ್ಷಯಾ ಸಹೋದರಿ ಸಂಧ್ಯಾ, ಬೈಕ್ ಸವಾರ ವಿಕಾಸ್ ಹಾಗೂ ಪಾದಚಾರಿ ಸೌಮ್ಯಾರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ವಿಕಾಸ್ ಕಾಲು ಮುರಿದಿದ್ದು, ಬೆನ್ನು ಮೂಳೆಗೂ ಪೆಟ್ಟಾಗಿದೆ. ಚಾಲಕ ಅತಿ ವೇಗವಾಗಿ ಅಜಾಗರೂಕತೆಯಿಂದ ಲಾರಿ ಚಲಾಯಿಸಿರುವುದೇ ದುರ್ಘಟನೆಗೆ ಕಾರಣ ಎಂದು ಪೊಲೀಸರು ಹಾಗೂ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಆರ್.ಟಿ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ನೀರು ತೆಗೆಯಲು ಬಿಬಿಎಂಪಿ ಉದಾಸೀನ

ವಾಹನಗಳ ಸಂಚಾರ ಅಧಿಕವಿರುವ ಹಿನ್ನೆಲೆಯಲ್ಲಿ ಪಾದಚಾರಿಗಳು ರಸ್ತೆ ದಾಟಲು ಅನುಕೂಲವಾಗಲೆಂದು ಅಂಡರ್ ಪಾಸ್ ನಿರ್ಮಿಸಲಾಗಿದೆ. ಭಾನುವಾರ ಸುರಿದ ಮಳೆಗೆ ಇದರಲ್ಲಿ ನೀರು ತುಂಬಿಕೊಂಡಿತ್ತು. ಇದರಿಂದ ಸಾರ್ವಜನಿಕರಿಗೆ ಅಂಡರ್ ಪಾಸ್ ಬಳಸುವುದು ಸಾಧ್ಯವಾಗುತ್ತಿರಲಿಲ್ಲ. ಅನಿವಾರ್ಯವಾಗಿ ಹೆದ್ದಾರಿ ರಸ್ತೆ ಮೇಲೆಯೇ ದಾಟಲು ಪರದಾಡುತ್ತಿದ್ದರು. ಸೋಮವಾರ ಬೆಳಗ್ಗೆ 9 ಗಂಟೆಗೆ ಅಂಡರ್ ಪಾಸ್‌ನಲ್ಲಿ ನೀರು ತುಂಬಿಕೊಂಡು ಸಮಸ್ಯೆ ಆಗುತ್ತಿರುವ ಸಂಗತಿ ಕಾನೂನು ಸುವ್ಯವಸ್ಥೆ ಪೊಲೀಸರ ಗಮನಕ್ಕೆ ಬಂದಿತ್ತು. ಬಿಬಿಎಂಪಿ ಕಂಟ್ರೋಲ್ ರೂಂಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಆದರೂ, ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ. ಬಾಲಕಿ ಸಾವನ್ನಪ್ಪಿರುವ ಸಂಗತಿ ಬೆಳಕಿಗೆ ಬರುತ್ತಿದ್ದಂತೆ ಎಚ್ಚೆತ್ತುಕೊಂಡ ಬಿಬಿಎಂಪಿ, ಅಂಡರ್ ಪಾಸ್‌ನಲ್ಲಿ ತುಂಬಿದ್ದ ನೀರು ತೆರವುಗೊಳಿಸಿ ಜನರ ಓಡಾಟಕ್ಕೆ ಅವಕಾಶ ಕಲ್ಪಿಸಿದೆ.



ವಿಜಯವಾಣಿ ಚಿತ್ರ

ಅಪಘಾತ ನಡೆದ ಹೆಬ್ಬಾಳ ಪೊಲೀಸ್ ಠಾಣೆ ಮುಂಭಾಗದ ಸ್ಥಳಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, ಸ್ಥಳೀಯ ಶಾಸಕ ಬೈರತಿ ಸುರೇಶ್ ಮತ್ತು ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

### ಪೈಲಟ್ ಕನಸು ನುಚ್ಚುನೂರು

ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದಳು. ಸೋಮವಾರ ಕೊನೆಯ ಪರೀಕ್ಷೆ ಇತ್ತು. ಅಕ್ಷಯಾ ನೂರಾರು ಕನಸು ಕಂಡಿದ್ದಳು. ಪೈಲಟ್ ಆಗಬೇಕು. ದೊಡ್ಡವಳಾದ ನಂತರ ಪ್ಯಾರೀಸ್‌ಗೆ ಹೋಗಿ ಸುತ್ತಾಡಬೇಕು ಎಂದು ಪ್ರತಿದಿನ ಇಷ್ಟಪಟ್ಟು ಓದುತ್ತಿದ್ದಳು. ಪೈಲಟ್ ಆಗುವುದು ಹೇಗೆ ಎಂದು ಅಂತರ್ಜಾಲದಲ್ಲಿ ಆಗಾಗ ಸರ್ಚ್ ಮಾಡುತ್ತಿದ್ದಳು. ಜವರಾಯನ ರೂಪದಲ್ಲಿ ಬಂದ ಬಿಬಿಎಂಪಿ ಕಸದ ಲಾರಿ ನನ್ನ ಮಗಳ ಕನಸನ್ನು ನುಚ್ಚುನೂರು ಮಾಡಿತು ಎಂದು ಅಕ್ಷಯಾ ತಂದೆ ನರಸಿಂಹ ಮೂರ್ತಿ ಕಣ್ಣೀರಿಟ್ಟಿದ್ದಾರೆ. ಮಧ್ಯಾಹ್ನ ಸಣ್ಣ ಮಗಳು ಆ್ಯಕ್ಸಿಡೆಂಟ್ ಆಗಿದೆ ಎಂದು ಕರೆ ಮಾಡಿ ತಿಳಿಸಿದ್ದಳು. ಇನ್ನೇನು 9ನೇ ತರಗತಿ ಮುಗೀತು. 10ನೇ ತರಗತಿ ಪುಸ್ತಕ ತರುತ್ತೇನೆ ಎಂದು ಸೋಮವಾರ ಬೆಳಗ್ಗೆ ಹೇಳಿದ್ದಳು ಎಂದು ಅಕ್ಷಯಾ ತಾಯಿ ಮಗಳ ಶವದ ಮುಂದೆ ಗೋಳಾಡಿದರು.

### ಮುಗಿಲುಮುಟ್ಟಿದ ಆಕ್ರಂದನ

ಅಕ್ಷಯಾ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಯಲಹಂಕ ಸರ್ಕಾರಿ ಆಸ್ಪತ್ರೆಗೆ ತರಲಾಗಿತ್ತು. ಅಲ್ಲಿಗೆ ಬಂದಿದ್ದ ಬಾಲಕಿಯ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಮಧುಗಿರಿಯಲ್ಲಿ ಬಾಲಕಿಯ ಅಂತ್ಯಕ್ರಿಯೆ ನಡೆಸಲು ಕುಟುಂಬಸ್ಥರು ತೀರ್ಮಾನಿಸಿದ್ದಾರೆ ಎಂದು ತಿಳಿದು ಬಂದಿದೆ.

### ಅಂಡರ್‌ಪಾಸ್ ಬಳಸಿದ್ದರೆ ಉಳಿಯುತ್ತಿತ್ತು ಜೀವ

ಪಾದಚಾರಿ ಮಾರ್ಗದ ಅಂಡರ್ ಪಾಸ್‌ನಲ್ಲಿ ನೀರು ತೆಗೆದಿದ್ದರೆ ಹೀಗಾಗುತ್ತಿರಲಿಲ್ಲ. ನೀರು ತುಂಬಿದ್ದ ಹಿನ್ನೆಲೆಯಲ್ಲಿ ಶಾಲೆ ಮಕ್ಕಳೆಲ್ಲ ರಸ್ತೆ ದಾಟುತ್ತಿದ್ದರು. ವೇಗವಾಗಿ ಬಂದ ಲಾರಿ ನಿಯಂತ್ರಣ ತಪ್ಪಿ ಬೈಕ್‌ಗೆ ಡಿಕ್ಕಿಯಾಗಿದೆ. ಲಾರಿಯ ಒಂದು ಭಾಗ ಬಾಲಕಿಗೆ ಗುದ್ದಿ ದುರ್ಘಟನೆ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

### ಸರಣಿ ರಸ್ತೆ ಅಪಘಾತ

ಮೂವರೂ ರಸ್ತೆಯ ಡಿವೈಡರ್ ದಾಟಿ ಬರುತ್ತಿದ್ದಾಗ ಅಕ್ಷಯಾ ಹಿಂದಿನಿಂದ ಕೊಂಚ ನಿಧಾನವಾಗಿ ಬರುತ್ತಿದ್ದಳು. ಅದೇ ರಸ್ತೆಯಲ್ಲಿ ಬಂದ ದ್ವಿಚಕ್ರ ವಾಹನ ಹಾಗೂ ಕಾರು ಚಾಲಕ ರಸ್ತೆ ದಾಟುವವರನ್ನು ಕಂಡು ನಿಧಾನ ಮಾಡಿದ್ದಾರೆ. ಆ ವಾಹನದ ಹಿಂದೆ ಬರುತ್ತಿದ್ದ ಲಾರಿ ಚಾಲಕ ಏಕಾಏಕಿ ಬ್ರೇಕ್ ಹಾಕಿದಾಗ ಲಾರಿ ನಿಯಂತ್ರಣಕ್ಕೆ ಸಿಗದೆ ಉಜ್ಜಿಕೊಂಡು ಮುಂದಿನ ಕಾರು ಹಾಗೂ ಬೈಕ್‌ಗೆ ಡಿಕ್ಕಿ ಹೊಡೆದು, ರಸ್ತೆ ದಾಟುತ್ತಿದ್ದ ಅಕ್ಷಯಾಗೆ ಗುದ್ದಿದೆ. ಏಕಾಏಕಿ ಬ್ರೇಕ್ ಹಾಕಿದ ಪರಿಣಾಮ ಲಾರಿಯ ಹಿಂದಿನಿಂದ ಬರುತ್ತಿದ್ದ ಕಾರು ಹಾಗೂ ಬೈಕ್‌ಗಳು ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆದು ಸರಣಿ ಅಪಘಾತ ಸಂಭವಿಸಿದೆ.

### ಶಾಲೆಗೆ ಬಿಎಂಟಿಸಿ ಬಸ್‌ನಲ್ಲೇ ಪ್ರಯಾಣ

ಬಿಎಂಟಿಸಿ ನಿರ್ವಾಹಕ ರಾಗಿರುವ ನರಸಿಂಹಮೂರ್ತಿ ತಮ್ಮ ಪತ್ನಿ ಗೀತಾ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರನ ಜತೆ ವಾಸವಿದ್ದಾರೆ. ಅಕ್ಷಯಾ ಮತ್ತು ಆಕೆಯ ತಂಗಿ ಸಂಧ್ಯಾ ಬಿಎಂಟಿಸಿ ಬಸ್‌ನಲ್ಲೇ ಶಾಲೆಗೆ ಹೋಗಿ ಬರುತ್ತಿದ್ದರು. ಸೋಮವಾರ ಪರೀಕ್ಷೆ ಬರೆದು ಮನೆಗೆ ವಾಪಸ್ ಆಗುವಾಗ ಅಪಘಾತ ಸಂಭವಿಸಿದೆ.

### 2 ಲಕ್ಷ ರೂ. ಪರಿಹಾರ

ಹೆಬ್ಬಾಳ ಶಾಸಕ ಬೈರತಿ ಸುರೇಶ್ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ನಂತರ ಮೃತ ಬಾಲಕಿ ಕುಟುಂಬಕ್ಕೆ ಸಾಂತ್ವನ ಹೇಳಿ ವೈಯಕ್ತಿಕವಾಗಿ 2 ಲಕ್ಷ ರೂ. ನೀಡಿದ್ದಾರೆ.

ಈ ರೀತಿಯ ಪ್ರಕರಣ ಮತ್ತೆ ಆಗಬಾರದು. ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನ್ಯಾಯ ಸಿಗುವವರೆಗೂ ಹೋರಾಟ ಮಾಡುತ್ತೇನೆ.

| ಬೈರತಿ ಸುರೇಶ್ ಶಾಸಕ

ಅಂಡರ್‌ಪಾಸ್‌ನಲ್ಲಿ ನೀರು ತುಂಬಿರುವ ಬಗ್ಗೆ ಪೊಲೀಸರು ಬಿಬಿಎಂಪಿಗೆ ಮಾಹಿತಿ ಕೊಟ್ಟಿದ್ದರೂ ಕ್ರಮ ಕೈಗೊಂಡಿಲ್ಲ. ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

| ಎಸ್. ಸವಿತಾ ಡಿಸಿಪಿ

ವಿಜಯವಾಣಿ
ಕನ್ನಡಿಗರ ಧ್ವನಿ





ಪಾಲಿಕೆ ಕಸದ ಲಾರಿ ಬಾಲಕಿಯನ್ನು ಬಲಿ ಪಡೆದ ನಂತರ ಹೆಬ್ಬಾಳದ ಅಂಡರ್‌ಪಾಸ್‌ನಲ್ಲಿ ನಿಂತಿದ್ದ ನೀರನ್ನು ಸಿಬ್ಬಂದಿ ತೆರವು ಮಾಡಿದರು.

# ಅಚಾತುರ್ಯದಿಂದ ಬಾಲಕಿ ದುರ್ಮರಣ

» ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿಕೆ

» ಪೊಲೀಸರ ತನಿಖೆ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ

**ಬೆಂಗಳೂರು:** ಹೆಬ್ಬಾಳ ಬಳಿ ಮೂರು ಅಡಿಯ ರಸ್ತೆ ವಿಭಜಕವನ್ನು ಏಕಾಏಕಿ ದಾಟಿ ಅಚಾತುರ್ಯದಿಂದ ಬರುವಾಗ ಬಿಬಿಎಂಪಿ ಘನತ್ಯಾಜ್ಯ ಹೊತ್ತೊಯ್ಯುವ ಲಾರಿ ಡಿಕ್ಕಿಯಾಗಿ ಬಾಲಕಿ ಸಾವು ಸಂಭವಿಸಿದೆ. ಸಿಸಿ ಕ್ಯಾಮರಾ ಆಧರಿಸಿ ಪೊಲೀಸರು ತಪ್ಪು ಯಾರದ್ದು ಎನ್ನುವುದರ ಬಗ್ಗೆ ವರದಿ ನೀಡಲಿದ್ದಾರೆ. ನಂತರ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದ್ದಾರೆ.

ಹೆಬ್ಬಾಳದಲ್ಲಿ ಅಪಘಾತ ನಡೆದ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ಗಂಟೆಗೆ ಈ ರಸ್ತೆಯಲ್ಲಿ 30 ಸಾವಿರಕ್ಕೂ ಅಧಿಕ ವಾಹನಗಳು ಸಂಚರಿಸುತ್ತವೆ. ಹೈವೇಯಲ್ಲಿ ಪಾದಚಾರಿಗಳು ಸಂಚಾರ ಮಾಡುವುದನ್ನು ನಿರ್ಬಂಧಿಸಿ ಅವರ ಅನುಕೂಲಕ್ಕಾಗಿ ಪಾದಚಾರಿ ಮೇಲ್ಸೇತುವೆ ಮತ್ತು ಅಂಡರ್‌ಪಾಸ್ ನಿರ್ಮಿಸಲಾಗಿದೆ. ಇದನ್ನು ಬಳಸುವುದು ಬಿಟ್ಟು ಮಧ್ಯಾಹ್ನದ ವೇಳೆ ಮೂವರು 3 ಅಡಿಯ ರಸ್ತೆ ವಿಭಜಕ ದಾಟಿ ಏಕಾಏಕಿ ರಸ್ತೆಗೆ ಬಂದಿದ್ದರಿಂದ ಲಾರಿ ಡಿಕ್ಕಿ ಹೊಡೆದಿದೆ. ಜನರು ಈ ರೀತಿಯ ಅಪಾಯಕಾರಿ ಕಾರ್ಯಕ್ಕೆ ಮುಂದಾಗಬಾರದು. ಘಟನೆ ನಡೆದ ಸ್ಥಳದ ಸುತ್ತಲೂ ಇರುವ ಸಿಸಿಟಿವಿ ಆಧರಿಸಿ ಮತ್ತು ಸೂಕ್ತ ತನಿಖೆ ನಡೆಸಿ ಯಾರದ್ದು ತಪ್ಪಿದೆ ಎಂಬುದರ ಬಗ್ಗೆ ಪೊಲೀಸರು ವರದಿ ನೀಡಲಿದ್ದಾರೆ. ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

**ರಸ್ತೆ ವಿಭಜಕ ಎತ್ತರಿಸಲು ಸೂಚನೆ:** ಮುಖ್ಯ ರಸ್ತೆಗಳಲ್ಲಿ ಜನರು ರಸ್ತೆ ದಾಟುವುದನ್ನು ತಡೆಯಲು ರಸ್ತೆ ವಿಭಜಕ ಹಾಕಿದರೂ ನಿಯಮ ಮೀರಿ ಹೋಗುವುದರಿಂದ ಕೆಲವೊಮ್ಮೆ ಅಪಘಾತ ಸಂಭವಿಸುತ್ತವೆ. ಕೂಡಲೇ ಹೆಬ್ಬಾಳ ರಸ್ತೆಯಲ್ಲಿನ ರಸ್ತೆ ವಿಭಜಕವನ್ನು 3 ಅಡಿಯಿಂದ 5 ಅಡಿಗೆ ಎತ್ತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಎರಡು ದಿನ ಮಳೆ ಬಂದಿದ್ದರಿಂದ ಪಾದಚಾರಿ ಸುರಂಗ ಮಾರ್ಗದಲ್ಲಿ ನೀರು ನಿಂತುಕೊಳ್ಳುವುದು ಸಹಜವಾಗಿದೆ. ನಿರ್ವಹಣೆ ಕಾರ್ಯ ಮಾಡಲಾಗುತ್ತಿದ್ದು, ಜನರು ಈ ಮಾರ್ಗಗಳಲ್ಲಿಯೇ ರಸ್ತೆ ದಾಟಬೇಕು ಎಂದು ಮನವಿ ಮಾಡಿದರು.

ಸ್ಥಳೀಯ ಶಾಸಕ ಬೈರತಿ ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಸರ್ಫರಾಜ್ ಖಾನ್, ರಸ್ತೆ ಮೂಲ ಸೌಕರ್ಯ ವಿಭಾಗದ ಮುಖ್ಯ ಇಂಜಿನಿಯರ್ ಪ್ರಹ್ಲಾದ್ ಇತರರಿದ್ದರು.



ಬಿಬಿಎಂಪಿ ಬೇಜವಾಬ್ದಾರಿ, ನಿರ್ಲಕ್ಷ್ಯ, ಅವೈಜ್ಞಾನಿಕ ಕಸ ವಿಲೇವಾರಿ ಹಾಗೂ ಅಸಮರ್ಪಕ ರಸ್ತೆ, ಚರಂಡಿ ನಿರ್ವಹಣೆಯಿಂದ ಜನರ ಜೀವಕ್ಕೆ ಕಿಮ್ಮತ್ತಿಲ್ಲದಾಗಿದೆ. ಹೆಬ್ಬಾಳದ ಮೇಲ್ಸೇತುವೆ ಬಳಿ ಕಸದ ಲಾರಿಗೆ ನೂರು ವರ್ಷ ಬಾಳಿ ಬದುಕಬೇಕಿದ್ದ ಬಾಲಕಿ ಬಲಿಯಾಗಿದ್ದಾಳೆ. ನಗರದ ಗೌರವ, ಪ್ರತಿಷ್ಠೆ ಹಾಳು ಮಾಡುತ್ತಿರುವ ಭ್ರಷ್ಟ ಅಧಿಕಾರಿಗಳನ್ನು ಹೊರಹಾಕಿ ಬಿಬಿಎಂಪಿಯನ್ನು ಸ್ವಚ್ಛಗೊಳಿಸಬೇಕಿದೆ. | ಎಚ್.ಡಿ.ಕುಮಾರಸ್ವಾಮಿ ಮಾಜಿ ಸಿಎಂ

# ಪಾಲಿಕೆ ಕಲ್ಯಾಣ ಯೋಜನೆಗೆ ಅರ್ಜಿ ಆಹ್ವಾನ

**ಬೆಂಗಳೂರು:** ಆರ್ಥಿಕವಾಗಿ ಹಿಂದುಳಿದ ಸಮುದಾಯಗಳು, ಅಂಗವಿಕಲರು ಮತ್ತು ತೃತೀಯ ಲಿಂಗಿಗಳ ಅಭಿವೃದ್ಧಿಗೆ 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಡಿ ಮೀಸಲಿಟ್ಟ 293 ಕೋಟಿ ರೂ. ಅನುದಾನವನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಬಳಸಲು ಬಿಬಿಎಂಪಿ ಅರ್ಜಿ ಆಹ್ವಾನಿಸಿದೆ. ಅರ್ಹ ಫಲಾನುಭವಿಗಳು ಬಿಬಿಎಂಪಿ ವೆಬ್‌ಸೈಟ್ https://bit.ly/3ikGvkl ಮೂಲಕ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಬೇಕು ಅಥವಾ ವಲಯಗಳ ಸಹಾಯಕ ಕಂದಾಯ ಅಧಿಕಾರಿ ಕಚೇರಿಯಿಂದ ಅರ್ಜಿ ಪಡೆದು ಏ.20ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಆಯಾ ವಲಯಗಳ ಕಚೇರಿಗೆ ಸಲ್ಲಿಸಬಹುದು.

## ವೇಗ ಪಡೆದುಕೊಳ್ಳದ ಮಕ್ಕಳ ಲಸಿಕಾಕರಣ | ಸೋಂಕು ಇಳಿಕೆಯೂ ಕಾರಣ

# ಕರೊನಾ ವ್ಯಾಕ್ಸಿನ್‌ಗೆ ಜನರ ನಿರಾಸಕ್ತಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯಾದ್ಯಂತ ಕೋವಿಡ್ ಲಸಿಕೆ ಪಡೆಯುವಲ್ಲಿ ಮಕ್ಕಳಿಂದ ವೃದ್ಧರವರೆಗೂ ನಿರಾಸಕ್ತಿ ವ್ಯಕ್ತವಾಗುತ್ತಿದೆ. 12-14 ವರ್ಷ ವಯೋಮಾನದವರ ಲಸಿಕಾಕರಣ ಆರಂಭವಾಗಿ ಒಂದು ವಾರ ಕಳೆದರೂ ವೇಗ ಪಡೆದಿಲ್ಲ.

ಮಕ್ಕಳ ಲಸಿಕೆ ಆರಂಭದ ದಿನ ಕೇವಲ 700 ಮಕ್ಕಳಿಗೆ ಲಸಿಕೆ ನೀಡಲಾಗಿತ್ತು. 2ನೇ ದಿನ 18 ಸಾವಿರ ಮಕ್ಕಳು ಲಸಿಕೆ ಪಡೆದುಕೊಂಡಿದ್ದಾರೆ. ಕೋವಿಡ್ ಲಸಿಕೆ ಆರಂಭದ ಮೊದಲ ದಿನ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ನೀಡಲಾಗಿತ್ತು. ಜ. 3ರಂದು ಚಾಲನೆ ನೀಡಲಾದ 15-17 ವರ್ಷದ ವಯೋಮಾನದವರ ಲಸಿಕಾ ಅಭಿಯಾನದ ಮೊದಲ ದಿನವೇ 4.14 ಲಕ್ಷ ಜನರಿಗೆ ಲಸಿಕೆ ನೀಡಲಾಗಿತ್ತು. ಆದರೆ ಮಾ. 16ರಂದು ಆರಂಭವಾದ ಮಕ್ಕಳ ಲಸಿಕೆ ವಿತರಣೆಯಲ್ಲಿ ವೇಗ ತಗ್ಗಿದೆ. ಬಾಗಲಕೋಟೆ, ಬೀದರ್, ದಾವಣಗೆರೆ, ಹಾವೇರಿ, ಮಂಡ್ಯ, ಶಿವಮೊಗ್ಗ ಸೇರಿ ಬಹುತೇಕ ಜಿಲ್ಲೆಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಮಕ್ಕಳಿಗೆ ಲಸಿಕೆ ವಿತರಿಸಲಾಗಿದೆ.

**ಸೋಂಕು ತಗ್ಗಿದ್ದರಿಂದ ನಿರಾಸಕ್ತಿ:** ಸದ್ಯ ಕೋವಿಡ್ ಸೋಂಕು ಪ್ರಮಾಣ ತಗ್ಗಿರುವುದರಿಂದ ಜನರು ಲಸಿಕೆ ಪಡೆಯುವತ್ತ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ. ಅಲ್ಲದೆ, ಆರೋಗ್ಯ ಕೇಂದ್ರದಲ್ಲಿ ಮಾತ್ರ ಲಸಿಕೆ ನೀಡಲಾಗುತ್ತಿದ್ದು, ಶಾಲೆಗಳಲ್ಲಿ ಲಸಿಕೆ ನೀಡುವ ಯಾವ ಪ್ರಕ್ರಿಯೆಯನ್ನೂ ಆರಂಭವಾಗದೆ ಇರುವುದು ಸಹ ಮಕ್ಕಳ ಲಸಿಕಾರಣದಲ್ಲಿ ಹಿನ್ನಡೆಗೆ ಕಾರಣವಾಗಿರಬಹದು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

12-14 ವಯೋಮಾನದ 20 ಲಕ್ಷ ಮಕ್ಕಳಿಗೆ ಲಸಿಕೆ ವಿತರಿಸುವ ಗುರಿ ಹೊಂದಲಾಗಿದ್ದು, ಈ ಪೈಕಿ ಆರಂಭದ ಆರು ದಿನಗಳಲ್ಲಿ (ಮಾ. 16 ರಿಂದ ಮಾ. 21ರವರೆಗೆ) 1.63 ಲಕ್ಷ ಮಕ್ಕಳಿಗೆ ಮಾತ್ರ ಲಸಿಕೆ ವಿತರಿಸಲಾಗಿದೆ.

**ಪರೀಕ್ಷೆಯೂ ಕಾರಣ:** ಈ ವಯೋಮಾನದ ಹೆಚ್ಚಿನ ಮಕ್ಕಳಿಗೆ ಪರೀಕ್ಷೆಗಳು ನಡೆಯುತ್ತಿದ್ದು, ಲಸಿಕೆ ಪಡೆದರೆ ಜ್ವರ, ಮೈಕೈ ನೋವು ಕಾಣಿಸಿಕೊಳ್ಳುವ ಭಯದಿಂದ ಪಾಲಕರು ಲಸಿಕೆ ಹಾಕಿಸಲು ಹಿಂದೇಟು ಹಾಕುತ್ತಿದ್ದಾರೆ. ಕೆಲವು ಮಕ್ಕಳಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿದ್ದರಿಂದ ಲಸಿಕೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ಕೂಡ ಲಸಿಕಾ ಅಭಿಯಾನದ ಹಿನ್ನಡೆಗೆ ಕಾರಣವಾಗಿರಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.




### 15-17 ವರ್ಷದವರಲ್ಲಿ 2ನೇ ಡೋಸ್ ನಿರ್ಲಕ್ಷ್ಯ

15-17 ವರ್ಷ ವಯೋಮಾನದವರ ಲಸಿಕಾಕರಣ ಕೂಡ ವೇಗವನ್ನು ಕಳೆದುಕೊಂಡಿದೆ. ಮೊದಲ ಲಸಿಕೆ ಪಡೆದ ಎರಡೂವರೆ ತಿಂಗಳು ಕಳೆದರೂ 24.65 ಲಕ್ಷ ಯುವ ಜನರಿಗಷ್ಟೇ ಲಸಿಕೆ ನೀಡಲಾಗಿದೆ. ಇನ್ನೂ 6 ಲಕ್ಷ ಮಂದಿ ಬಾಕಿ ಉಳಿದಿದ್ದಾರೆ. ಈ ವಯೋಮಾನದವರಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುತ್ತಿದ್ದು, ಲಸಿಕೆ ಕೊರತೆಯಿಂದ 28ನೇ ದಿನಕ್ಕೆ ಎರಡನೇ ಡೋಸ್ ಲಸಿಕೆ ಪಡೆಯಲು ಬಹಳಷ್ಟು ಮಂದಿಗೆ ಸಾಧ್ಯವಾಗಿಲ್ಲ.

### ಮುನ್ನೆಚ್ಚರಿಕೆ ಡೋಸ್‌ಗೂ ಹಿಂದೇಟು

60 ವರ್ಷ ಮೇಲ್ಪಟ್ಟ ಎಲ್ಲರಿಗೂ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತಿದೆ. ಆದರೆ, ಸೋಂಕು ಬಹುತೇಕ ಇಳಿಕೆಯಾಗಿರುವುದರಿಂದ ಬಹಳಷ್ಟು ಮಂದಿ ಇದಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ



## ನಿಯಂತ್ರಣಕ್ಕೆ ಸಮರ್ಥ, ಜನರಲ್ಲಿ ಭಯ ಬೇಡ

# ಆಗಸ್ಟ್‌ಗೆ ನಾಲ್ಕನೇ ಅಲೆ ಸಾಧ್ಯತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ನಾಲ್ಕನೇ ಅಲೆ ಆಗಸ್ಟ್‌ನಲ್ಲಿ ಪ್ರವೇಶಿಸುವ ಸಾಧ್ಯತೆಗಳಿವೆ ಎಂದು ಐಐಟಿ ಕಾನ್ಪುರ ತಜ್ಞರು ಅಂದಾಜಿಸಿದ್ದಾರೆ. ಹೊಸ ಪ್ರಭೇದ ಹೊತ್ತು ತರುವ ನಾಲ್ಕನೇ ಅಲೆ ಬಗ್ಗೆ ಜನರಲ್ಲಿ ಭಯ-ಭೀತಿ ಬೇಡವೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಅಭಯ ನೀಡಿದರು. ವಿಧಾನ ಪರಿಷತ್‌ನಲ್ಲಿ ಶೂನ್ಯ ವೇಳೆ ಬಿಜೆಪಿಯ ಶಶೀಲ್ ನಮೋಶಿ ಈ ವಿಷಯ ಪ್ರಸ್ತಾಪಿಸಿದಾಗ ಉತ್ತರಿಸಿದರು. ವೈರಾಣು ಬಿಎ2 ಹೊಸ ಪ್ರಭೇದವು ಮೊದಲಿಗೆ ಫಿಲಿಪೈನ್ಸ್‌ನಲ್ಲಿ ಪತ್ತೆಯಾಗಿದ್ದು, ನಂತರ 40 ದೇಶಗಳಿಗೆ ಸೋಂಕು ಹರಡಿದೆ. ಕರೊನಾ ಮೂರನೇ ಅಲೆ ಪ್ರವೇಶದ ಬಗ್ಗೆ ಅಂದಾಜಿಸಿದ್ದ ಐಐಟಿ ಕಾನ್ಪುರ ತಜ್ಞರು ಇದೀಗ ನಾಲ್ಕನೇ ಅಲೆ ಪ್ರವೇಶದ ಬಗ್ಗೆಯೂ ಅಂದಾಜಿಸಿದ್ದಾರೆ ಎಂದರು.



**ಲಸಿಕೆ ವಿತರಣೆಗೆ ವೇಗ:** ಈಗಾಗಲೆ ಅರ್ಹರಿಗೆ ಶೇ.100 ಮೊದಲ ಡೋಸ್, ಶೇ.96 ಎರಡನೇ ಡೋಸ್ ಲಸಿಕೆ ವಿತರಿಸಲಾಗಿದೆ. 12ರಿಂದ 14 ವಯೋಮಿತಿಯ 1.76 ಲಕ್ಷ ಮಕ್ಕಳು, 15ರಿಂದ 17 ವಯೋಮಿತಿಯ 19.10 ಲಕ್ಷ ಮಕ್ಕಳಿಗೆ ಮೊದಲ ಡೋಸ್ ಹಾಕಲಾಗಿದೆ. ಅಲ್ಲದೆ, ಸೋಂಕು ಸಾಧ್ಯತೆಯುಳ್ಳವರು, 60 ವರ್ಷ ಮೇಲ್ಪಟ್ಟವರ ಪೈಕಿ 13,10,074 ಬೂಸ್ಟರ್ ಡೋಸ್ ಹಾಗೂ 12ರಿಂದ 17 ವಯೋಮಿತಿ ಮಕ್ಕಳಿಗೆ ಲಸಿಕೆ ವಿತರಣೆಗೆ ವೇಗದ ಸ್ಪರ್ಶ ನೀಡಲಾಗುವುದು ಎಂದು ಭರವಸೆ ನೀಡಿದರು.




**ನಿಯಂತ್ರಣಕ್ಕೆ ಸಮರ್ಥ:** ರಾಜ್ಯದಲ್ಲಿ ಒಟ್ಟು 55,256 ಆಮ್ಲಜನಕ ಸಹಿತ ಹಾಸಿಗೆಗಳಿವೆ. 1,170 ಮೆಟ್ರಿಕ್ ಟನ್ ಉತ್ಪಾದನಾ ಸಾಮರ್ಥ್ಯದ ಆಮ್ಲಜನಕ ಘಟಕಗಳು ಹಾಗೂ ಸಂಗ್ರಹಣಾ ವ್ಯವಸ್ಥೆಯಿದೆ. ದಿನವೊಂದಕ್ಕೆ 2.50 ಲಕ್ಷ ಮಾದರಿ ತಪಾಸಿಸುವ 255 ಪ್ರಯೋಗಾಲಯಗಳಿವೆ. ಅಲ್ಲದೆ, ಮೂರು ಅಲೆಗಳನ್ನು ನಿಭಾಯಿಸಿದ ಅನುಭವವುಳ್ಳ, ನುರಿತ ವೈದ್ಯರು ಮತ್ತು ಸಿಬ್ಬಂದಿಯಿದ್ದು, ಪರಿಸ್ಥಿತಿ ನಿಯಂತ್ರಣಕ್ಕೆ ಸರ್ಕಾರ ಸಮರ್ಥವಾಗಿದೆ. ಹೀಗಾಗಿ ಜನರು ಆತಂಕಗೊಳ್ಳುವುದು ಬೇಡ. ಆದರೆ ಮುನ್ನೆಚ್ಚರಿಕೆ ನಿಯಮಗಳನ್ನು ಪಾಲಿಸಿ ಸಹಕರಿಸಬೇಕು ಎಂದು ಡಾ.ಕೆ.ಸುಧಾಕರ್ ಕೋರಿದರು.

### ಮುಖ್ಯಮಂತ್ರಿ ಸಮ್ಮುಖ ಸಭೆ

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಶೀಘ್ರವೇ ಸಭೆ ನಡೆಯಲಿದ್ದು, ಸಚಿವರು, ತಾಂತ್ರಿಕ ತಜ್ಞರು ಹಾಗೂ ಅಧಿಕಾರಿಗಳ ಜತೆಗೆ ಚರ್ಚಿಸಿ ನಾಲ್ಕನೇ ಅಲೆ ಎದುರಿಸಲು ಮಾಡಿಕೊಳ್ಳಬೇಕಾದ ತಯಾರಿಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಮಾಸ್ಕ್ ಕಡ್ಡಾಯ ಸೇರಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಜಾರಿ ಕುರಿತು ಇದೇ ಸಭೆಯಲ್ಲಿ ಸಿಎಂ ಸೂಕ್ತ ನಿರ್ಧಾರಕ್ಕೆ ಬರಲಿದ್ದಾರೆ. ಆರೋಗ್ಯ ಸವಲತ್ತುಗಳ ಸೃಜನೆ, ಲಸಿಕೆ ವಿತರಣೆಯು ಸರ್ಕಾರದ ಬದ್ಧತೆಗೆ ನಿದರ್ಶನವೆಂದು ಡಾ.ಕೆ.ಸುಧಾಕರ್ ಹೇಳಿದರು.

# ಎಲ್ಲರಿಗೂ 3ನೇ ಡೋಸ್ ಚಿಂತನೆ

## ಚೀನಾದಲ್ಲಿ ಸೋಂಕು ಹೆಚ್ಚಳ | ಹಲವು ನಗರಗಳು ಲಾಕ್‌ಡೌನ್

**ನವದೆಹಲಿ:** ಜಗತ್ತಿನ ಹಲವು ಭಾಗಗಳಲ್ಲಿ ಕರೊನಾ ಸೋಂಕು ಮತ್ತೆ ತೀವ್ರಗೊಳ್ಳುತ್ತಿರುವುದರಿದ ದೇಶದ ಎಲ್ಲ ವಯಸ್ಕರಿಗೆ ಲಸಿಕೆಯ ಮುನ್ನೆಚ್ಚರಿಕೆ (ಬೂಸ್ಟರ್) ಡೋಸ್ ನೀಡಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ. ಮೂರನೇ ಡೋಸ್ ಇಲ್ಲದೆ ವಿದೇಶಗಳಿಗೆ ತೆರಳುವುದು ಕೆಲವು ಭಾರತೀಯರಿಗೆ ಕಷ್ಟವಾಗುತ್ತಿರುವುದು ಕೂಡ ಬೂಸ್ಟರ್ ಡೋಸ್ ಚಿಂತನೆಗೆ ಪ್ರೇರಣೆಯಾಗಿದೆ. ಸದ್ಯಕ್ಕೆ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೇಲ್ಪಟ್ಟವರಿಗೆ ಮಾತ್ರವೇ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತಿದೆ. ಇತರರಿಗೂ ಉಚಿತವಾಗಿ ಬೂಸ್ಟರ್ ಡೋಸ್ ನೀಡಬೇಕೇ ಎಂದು ಸರ್ಕಾರ ಚರ್ಚಿಸುತ್ತಿದೆ ಎಂದು ಮೂಲಗಳು ಹೇಳಿವೆ.




**ಚೀನಾದಲ್ಲಿ ಲಕ್ಷಾಂತರ ಜನರು ಲಾಕ್:** ಚೀನಾದಲ್ಲಿ ಕೋವಿಡ್ ಸೋಂಕು ಉಲ್ಬಣವಾಗುತ್ತಿದ್ದು ಅನೇಕ ನಗರಗಳಲ್ಲಿ ಹತ್ತಾರು ಲಕ್ಷ ಜನರನ್ನು ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಎರಡು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಸೋಂಕಿನ ದೊಡ್ಡ ಪ್ರಮಾಣದ ಆಸ್ಫೋಟದಿಂದಾಗಿ ಚೀನಾ ತತ್ತರಿಸಿದ್ದು, ಈಶಾನ್ಯದ ಅನೇಕ ಮಹಾ ನಗರಗಳಲ್ಲಿ ಲಾಕ್‌ಡೌನ್ ಜಾರಿಗೊಳಿಸಿದೆ. ಜಿಲಿನ್ ನಗರದಲ್ಲೇ ಸುಮಾರು 45 ಲಕ್ಷ ನಿವಾಸಿಗಳು ಮನೆಯೊಳಗೇ ನಿರ್ಬಂಧಿತರಾಗಿದ್ದಾರೆ. ದೇಶದಲ್ಲಿ ಭಾನುವಾರ 4,000ಕ್ಕೂ ಅಧಿಕ ಹೊಸ ಪ್ರಕರಣಗಳು ವರದಿಯಾಗಿವೆ. ಚಾಂಗ್‌ಚುನ್ ಪ್ರಾಂತ್ಯದ ರಾಜಧಾನಿಯಲ್ಲಿ ಕೂಡ ಮೂರು ದಿನ ನಿರ್ಬಂಧಗಳನ್ನು ವಿಧಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

### ಅಧಿಕ ರಕ್ಷಣೆ ನೀಡುವ ಲಸಿಕೆ

**ಫೈಜರ್-ಬಯೋಎನ್‌ಟೆಕ್ ಅಥವಾ ಮಾಡರ್ನಾ ಎಂಆರ್‌ಎನ್‌ಎ-ಆಧಾರಿತ ಲಸಿಕೆ ಪಡೆದವರಲ್ಲಿ ಬಿಎ.1 ಅಥವಾ ಬಿಎ.2 ಪ್ರಭೇದದ ಕರೊನಾ ಸೋಂಕಿತರಲ್ಲಿ ಅನೇಕ ತಿಂಗಳ ಕಾಲ ಗಣನೀಯ ರಕ್ಷಣೆ ಸಿಗುತ್ತದೆ ಎಂದು ಹೊಸ ಅಧ್ಯಯನವೊಂದರಿಂದ ತಿಳಿದು ಬಂದಿದೆ.**



**ಗುರುಗ್ರಾಮದಲ್ಲಿ ಲಸಿಕೆ ಪಡೆದ ವಿದ್ಯಾರ್ಥಿನಿ.**

**ಭಾರತದಲ್ಲಿ ಒಂದೂವರೆ ಸಾವಿರಕ್ಕಿಳಿದ ಕೇಸ್:** ದೇಶದಲ್ಲಿ ಕರೊನಾ ಸೋಂಕು ಕ್ಷೀಣಿಸಿದ್ದು ಸೋಮವಾರ ಬೆಳಗ್ಗೆ ಅಂತ್ಯಗೊಂಡ ಒಂದು ದಿನದ ಅವಧಿಯಲ್ಲಿ 1,549 ಹೊಸ ಕೇಸ್‌ಗಳು ದೃಢಪಟ್ಟಿವೆ. 31 ರೋಗಿಗಳು ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳು 25,106ಕ್ಕೆ ಇಳಿದಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# ಕೊರೊನಾ 4ನೇ ಅಲೆ ಆಗಸ್ಟ್‌ನಲ್ಲಿ; ಎದುರಿಸಲು ಸನ್ನದ್ಧ

**ವಿಧಾನಪರಿಷತ್ತು:** ಕೊರೊನಾ ನಾಲ್ಕನೇ ಅಲೆ ಸಮೀಪಿಸುತ್ತಿದ್ದು, ಆಗಸ್ಟ್ ತಿಂಗಳಲ್ಲೇ ಬರಲಿದೆ ಎಂದು ಅಂದಾಜಿಸಲಾಗಿದೆ. ಅದನ್ನು ಎದುರಿಸಲು ಸರ್ಕಾರ ಸನ್ನದ್ಧವಾಗಿದೆ. ಜನತೆ ಹೆದರುವ ಅವಶ್ಯಕತೆಯಿಲ್ಲ, ಆದರೆ, ಕೋವಿಡ್ -19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಬಿಜೆಪಿ ಸದಸ್ಯ ಶಶೀಲ್ ಜಿ. ನಮೋಶಿ ಅವರು



ಸೋಮವಾರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ಕೊರೊನಾದ ಬಿಎ-2 ಹೊಸ ಪ್ರಭೇದ ಫಿಲಿಪ್ಪೀನ್ಸ್ ದೇಶದಲ್ಲಿ ಮೊದಲು ಪತ್ತೆಯಾಗಿದ್ದು 40 ದೇಶಗಳಲ್ಲಿಕಂಡು ಬಂದಿದೆ. ಮೂರನೇ ಅಲೆ ಭಾರತದಲ್ಲಿ ಯಾವಾಗ ಬರಬಹುದು ಎಂದು ಹೇಳಿದ್ದ ಐಐಟಿ ಕಾನ್ಪುರ ಸಂಸ್ಥೆ ಈಗ 4ನೇ ಅಲೆ ಆಗಸ್ಟ್‌ನಲ್ಲಿ ಬರಬಹುದು ಎಂದಿದೆ. ಹಿಂದಿನ ಅಲೆಗಳ ವೇಳೆ ಕಲಿತ ಅನುಭವಗಳ ಆಧಾರದಲ್ಲಿ, 4ನೇ ಅಲೆ ತಡೆಗಟ್ಟಲು ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ನಮ್ಮ ಲಸಿಕಾ ಪ್ರಕ್ರಿಯೆ ವ್ಯಾಪಕವಾಗಿದ್ದು, 4ನೇ ಅಲೆ ತಡೆಗಟ್ಟಲು ಬಹುಮಟ್ಟಿಗೆ ಸಹಾಯಕವಾಗಲಿದೆ ಎಂದೂ ಹೇಳಿದ್ದಾರೆ.

ರಾಜ್ಯದಲ್ಲಿ ಮೊದಲ ಡೋಸ್ ಲಸಿಕೆ ಪಡೆದವರ ಪ್ರಮಾಣ ಶೇ.107ರಷ್ಟಿದೆ. 4.74 ಕೋಟಿ ಮೊದಲ ಡೋಸ್ ಲಸಿಕೆ ನೀಡಲಾಗಿದ್ದು, ಶೇ. 96ರಷ್ಟು ಜನ ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ. 12 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಈಗಾಗಲೇ 1.25 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. 56 ಸಾವಿರ ಆಕ್ಸಿಜನ್ ಬೆಡ್‌ಗಳಿವೆ, ಆಕ್ಸಿಜನ್ ಉತ್ಪಾದನಾ ಮತ್ತು ಸಂಗ್ರಹ ಸಾಮರ್ಥ್ಯ 300 ಮೆಟ್ರಿಕ್ ಟನ್‌ನಿಂದ 1,170 ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗಿದೆ ಎಂದೂ ಸಚಿವ ಸುಧಾಕರ್ ಮಾಹಿತಿ ನೀಡಿದ್ದಾರೆ.

# ಕಸದ ಲಾರಿಗೆ ಬಾಲಕಿ ಬಲಿ

**ಬೆಂಗಳೂರು:** ರಾಜಧಾನಿಯಲ್ಲಿ ಬಿಬಿಎಂಪಿ ಕಸದ ಲಾರಿಗೆ ಶಾಲಾ ಬಾಲಕಿಯೊಬ್ಬಳು ಬಲಿಯಾಗಿದ್ದು, ಪಾದಚಾರಿ ಮಹಿಳೆ, ದ್ವಿಚಕ್ರ ವಾಹನ ಸವಾರನೂ ಗಾಯಗೊಂಡಿದ್ದು ಸಾರ್ವಜನಿಕ ವಲಯದಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಸೋಮವಾರ ಮಧ್ಯಾಹ್ನ 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ ಪರೀಕ್ಷೆ ಮುಗಿಸಿ ಹೆಬ್ಬಾಳ ಬಸ್ ನಿಲ್ದಾಣದಿಂದ ಪೊಲೀಸ್ ಠಾಣೆಯ ಕಡೆಗೆ ನಡೆದುಕೊಂಡು ಬರುತ್ತಿದ್ದಳು. ಮನೆಗೆ ತೆರಳಲು ರಸ್ತೆ ದಾಟುತ್ತಿದ್ದಾಗ ಅತಿವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿ ಬಾಲಕಿಗೆ ಡಿಕ್ಕಿ ಹೊಡೆದಿದ್ದು, ಲಾರಿಯ ಹಿಂದಿನ ಗಾಲಿಯು ಅಕ್ಷಯಾ ತಲೆ ಮೇಲೆ ಹರಿದು ಹೋಗಿದೆ. ಪರಿಣಾಮ ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಅಲ್ಲಿದ್ದ ಮತ್ತಿಬ್ಬರು ಗಾಯಗೊಂಡಿದ್ದಾರೆ. ಬಾಲಕಿ ತಾಯಿ ಗೀತಾ ನರಸಿಂಹ ಮೂರ್ತಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ತನಿಖೆ ಕೈಗೊಳ್ಳಲಾಗಿದೆ.

▶ ವಿವರ: 2

# ಬಿಬಿಎಂಪಿ ನಿರ್ಲಕ್ಷ್ಯಕ್ಕೆ ಮತ್ತೊಂದು ಬಲಿ

## ಬಿಬಿಎಂಪಿ ಕಸದ ಲಾರಿಗೆ ಶಾಲಾ ಬಾಲಕಿ ಸ್ಥಳದಲ್ಲೇ ಸಾವು | ಪರೀಕ್ಷೆ ಬರೆದು ಮನೆಗೆ ತೆರಳುವಾಗ ದುರ್ಮರಣ



**ಲಾರಿ ಚಾಲಕನ ಅಜಾಗರೂಕತೆ ಚಾಲನೆಯಿಂದ ಅವಘಡ**

**ಬೆಂಗಳೂರು:** ರಾಜಧಾನಿಯಲ್ಲಿ ಬಿಬಿಎಂಪಿ ಕಸದ ಲಾರಿಗೆ ಶಾಲಾ ಬಾಲಕಿಯೊಬ್ಬಳು ಬಲಿಯಾಗಿದ್ದು, ಪಾದಚಾರಿ ಮಹಿಳೆ, ದ್ವಿಚಕ್ರ ವಾಹನ ಸವಾರನೂ ಗಾಯಗೊಂಡಿದ್ದು, ಸಾರ್ವಜನಿಕ ವಲಯದಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಸೋಮವಾರ ಮಧ್ಯಾಹ್ನ ಬಿಬಿಎಂಪಿ ಕಸದ ಲಾರಿಯು ಹೆಬ್ಬಾಳ ಪೊಲೀಸ್ ಠಾಣೆ ಎದುರು ಕಾರು ಹಾಗೂ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದರಿಂದ ರಸ್ತೆ ದಾಟುತ್ತಿದ್ದ ಹೆಬ್ಬಾಳದ ಕುಂತಿ ಗ್ರಾಮದ ಸಿ ಬ್ಲಾಕ್ ನಿವಾಸಿ ಬಿಎಂಟಿಸಿ ಬಸ್ ನಿರ್ವಾಹಕ ನರಸಿಂಹಮೂರ್ತಿ ಪುತ್ರಿ ಅಕ್ಷಯಾ (14) ಮೃತಪಟ್ಟಿದ್ದಾಳೆ.

ಇದೇ ವೇಳೆ ಪಾದಚಾರಿ ಸೌಮ್ಯ (28), ದ್ವಿಚಕ್ರ ವಾಹನ ಸವಾರ (42) ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಒಂಬತ್ತನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ ಪರೀಕ್ಷೆ ಮುಗಿಸಿ ಮನೆಗೆ ತೆರಳಲು ರಸ್ತೆ ದಾಟುತ್ತಿದ್ದಾಗ ಈ ಘಟನೆ ನಡೆದಿದೆ.



ಅಕ್ಷಯಾ

**ಚಾಲಕ ಬಂಧನ:** ಅಜಾಗರೂಕತೆ ಚಾಲನೆ ಮಾಡಿ ಅಪಘಾತ ಮಾಡಿದ ಆರೋಪದಡಿ ಬಿಬಿಎಂಪಿ ಕಸದ ಲಾರಿ ಚಾಲಕ ಮಂಜುನಾಥ್ ಎಂಬಾತನನ್ನು ಬಂಧಿಸಿ, ಲಾರಿ ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಉತ್ತರ ಸಂಚಾರ ವಿಭಾಗದ ಡಿಸಿಪಿ ಎಸ್. ಸವಿತಾ ಹೇಳಿದರು.

ಸದಾಶಿವನಗರದ ಸ್ಟೆಲ್ ಮೇರಿಸ್ ಶಾಲೆಯಲ್ಲಿ ಓದುತ್ತಿದ್ದ ಅಕ್ಷಯಾ, ಪ್ರತಿದಿನ ಬಿಎಂಟಿಸಿ ಬಸ್‌ನಲ್ಲಿ ಓಡಾಡುತ್ತಿದ್ದರು. ಸೋಮವಾರ ಸದಾಶಿವನಗರದಿಂದ ಹೆಬ್ಬಾಳಕ್ಕೆ ಬಂದು, ಹೆಬ್ಬಾಳ ಬಸ್ ನಿಲ್ದಾಣದಿಂದ ಪೊಲೀಸ್ ಠಾಣೆಯ ಕಡೆಗೆ ನಡೆದುಕೊಂಡು ಬರುತ್ತಿದ್ದರು.

ಈ ವೇಳೆ, ಮೇಕ್ರಿ ವೃತ್ತದ ಕಡೆಯಿಂದ ಅತಿವೇಗವಾಗಿ ಬಂದ ಬಿಬಿಎಂಪಿ ಕಸದ ಲಾರಿಯು ಬಾಲಕಿಗೆ ಡಿಕ್ಕಿ ಹೊಡೆದಿದ್ದು, ಲಾರಿಯ ಹಿಂದಿನ ಗಾಲಿಯು ಅಕ್ಷಯಾ ತಲೆ ಮೇಲೆ ಹರಿದು ಹೋಗಿದೆ. ಇದರ ಪರಿಣಾಮ ಬಾಲಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಇದೇ ವೇಳೆ ಪಾದಚಾರಿ ಸೌಮ್ಯ ಮತ್ತು ದ್ವಿಚಕ್ರ ವಾಹನ ಸವಾರನಿಗೂ ತೀವ್ರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತ ಬಾಲಕಿ ತಾಯಿ ಗೀತಾ ನರಸಿಂಹ ಮೂರ್ತಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಿ, ತನಿಖೆ ಕೈಗೊಳ್ಳಲಾಗಿದೆ.

ಭಾನುವಾರ ಸುರಿದ ಮಳೆಯಿಂದ ಹೆಬ್ಬಾಳ ಪೊಲೀಸ್ ಠಾಣೆ ಬಳಿ ಇರುವ ಕೆಳ ಸೇತುವೆ ಜಲಾವೃತಗೊಂಡಿದ್ದ ಸಾರ್ವಜನಿಕರು ಅದನ್ನು ಬಳಕೆ ಮಾಡಲು ಆಗುತ್ತಿರಲಿಲ್ಲ ಎಂದು ಹೇಳಲಾಗಿದೆ.

ಕಸದ ಲಾರಿಗಳ ವೇಗ ಹಾಗೂ ನಿರ್ಲಕ್ಷ್ಯದಿಂದ ಅಮಾಯಕ ಮಕ್ಕಳು ಬಲಿಯಾಗುತ್ತಿದ್ದು ಬಿಬಿಎಂಪಿ ಮೌನ ವಹಿಸಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲೂ ಟೀಕೆ ವ್ಯಕ್ತವಾಗಿದೆ.

**ನಾಲ್ವರಿಗೆ ಡಿಕ್ಕಿ ತಪ್ಪಿಸಲು ಹೋದಾಗ ಬಾಲಕಿ ಸಾವು:** ಬಿಬಿಎಂಪಿ ಕಸದ ಲಾರಿಯು ಹೆಬ್ಬಾಳ ಪೊಲೀಸ್ ಠಾಣೆ ಎದುರು ಹೋಗುತ್ತಿದ್ದಾಗ ನಾಲ್ವರು ರಸ್ತೆ ದಾಟುತ್ತಿದ್ದರು. ಈ ವೇಳೆ ಲಾರಿ ಅವರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋದಾಗ ಬಾಲಕಿಯ ಬ್ಯಾಗ್ ಸಿಲುಕಿಕೊಂಡು ಅಪಘಾತ ಸಂಭವಿಸಿದೆ. ಹೆಬ್ಬಾಳದ ಕುಂತಿಗ್ರಾಮದ ಸಿ ಬ್ಲಾಕ್ ನಿವಾಸಿ ಬಿಎಂಟಿಸಿ ಬಸ್ ನಿರ್ವಾಹಕ ನರಸಿಂಹಮೂರ್ತಿ ಪುತ್ರಿ ಅಕ್ಷಯಾ ಮೂಲತಃ ಮಧುಗಿರಿಯವರಾಗಿದ್ದು, ಮಂಗಳವಾರ ಅವರ ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

## ಹೈಕೋರ್ಟ್ ಛೀಮಾರಿಗೂ ಬಿಬಿಎಂಪಿ ಎಚ್ಚರ ವಹಿಸುತ್ತಿಲ್ಲ: ಎಚ್‌ಡಿಕೆ ಆಕ್ರೋಶ

**ಬೆಂಗಳೂರು:** ಹೆಬ್ಬಾಳದ ಬಳಿ ಶಾಲಾ ಬಾಲಕಿಯೊಬ್ಬರನ್ನು ಬಿಬಿಎಂಪಿ ಕಸದ ಲಾರಿ ಬಲಿ ಪಡೆದ ಘಟನೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು, ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಬಿಬಿಎಂಪಿ ಬೇಜವಾಬ್ದಾರಿ, ನಿರ್ಲಕ್ಷ್ಯ, ಅವೈಜ್ಞಾನಿಕ ಕಸದ ವಿಲೇವಾರಿ ಹಾಗೂ ಅಸಮರ್ಪಕ ರಸ್ತೆ, ಚರಂಡಿ ನಿರ್ವಹಣೆಯಿಂದ ಜನರ ಜೀವಕ್ಕೆ ಕಿಮ್ಮತ್ತಿಲ್ಲದಾಗಿದೆ. ಹೆಬ್ಬಾಳದ ಮೇಲುಸೇತುವೆ ಬಳಿ ಕಸದ ಲಾರಿಗೆ ನೂರು ವರ್ಷ ಬಾಳಿ ಬದುಕಬೇಕಿದ್ದ ಬಾಲಕಿ ಬಲಿಯಾಗಿದ್ದಾಳೆ.

ಭಾನುವಾರದಂದು ಬೆಂಗಳೂರಿನಲ್ಲಿ ಸುರಿದ ಮಳೆಯಿಂದ ಆ ಫ್ಲೈ ಓವರ್ ಅಂಡರ್ ಪಾಸ್‌ನಲ್ಲಿ ನೀರು ತುಂಬಿತ್ತು. ಹೀಗಾಗಿ ಮಕ್ಕಳು ಅಂಡರ್ ಪಾಸ್ ನಲ್ಲಿ ಹೋಗದೆ ರಸ್ತೆ ಮೂಲಕ ದಾಟುತ್ತಿದ್ದರು. ಆ ಸಂದರ್ಭದಲ್ಲಿ ದುರಂತ ಘಟಿಸಿದೆ.

ಸ್ವತಃ ಹೈ ಕೋರ್ಟ್ ಛೀಮಾರಿ ಹಾಕಿದ್ದರೂ, ಎಂಜಿನಿಯರುಗಳನ್ನು ಜೈಲಿಗೆ ಅಟ್ಟುವುದಾಗಿ ಎಚ್ಚರಿಕೆ ನೀಡಿದ್ದರೂ ಎಮ್ಮೆ ಚರ್ಮದ ಪಾಲಿಕೆ ಪಾಠ ಕಲಿತಿಲ್ಲ, ಅಲ್ಲಿನ ಅದಕ್ಷ ಅಧಿಕಾರಿಗಳನ್ನು ಪೋಷಣೆ ಮಾಡುತ್ತಿರುವ ಸರ್ಕಾರಕ್ಕೆ ಆತ್ಮಸಾಕ್ಷಿ ಎನ್ನುವುದೇ ಇಲ್ಲವಾಗಿದೆ.

ಬೆಂಗಳೂರು ನಗರದ ಗೌರವ, ಪ್ರತಿಷ್ಠೆ ಹಾಳು ಮಾಡುತ್ತಿರುವ ಭ್ರಷ್ಟ ಅಧಿಕಾರಿಗಳನ್ನು ಅಲ್ಲಿಂದ ಹೊರಹಾಕಿ ಬಿಬಿಎಂಪಿಯನ್ನು ಮೊದಲು ಸ್ವಚ್ಛಗೊಳಿಸಬೇಕಿದೆ. ಅಲ್ಲಿಂದಲೇ ಬೆಂಗಳೂರಿನ ಸ್ವಚ್ಛತೆ ಆರಂಭವಾಗಬೇಕು ಎಂದು ಹೇಳಿದ್ದಾರೆ.

## ದೂರಿಗೆ ಸ್ಪಂದಿಸಿದ್ದರೆ ಜೀವ ಉಳಿಯುತ್ತಿತ್ತು

ಕೆಳ ಸೇತುವೆಯಲ್ಲಿ ನೀರು ನಿಂತಿದ್ದರಿಂದ, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿದ್ದರಿಂದ ಸ್ಥಳೀಯರು ಬಿಬಿಎಂಪಿ ಸಹಾಯವಾಣಿಗೆ ಕರೆ ಮಾಡಿ ದೂರು ಸಲ್ಲಿಸಿದ್ದರು. ಆದರೆ, ಬಿಬಿಎಂಪಿ ಸಿಬ್ಬಂದಿ ನೀರು ತೆರವು ಮಾಡಿರಲಿಲ್ಲ. ಬಾಲಕಿ ಸಾವಿಗೆ ಬಿಬಿಎಂಪಿ ಅವರೇ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.

## ಪೈಲೆಟ್ ಕನಸು ಹೊಂದಿದ್ದ ಬಾಲಕಿ

ಓದುವುದರಲ್ಲಿ ಇಡೀ ತರಗತಿಗೆ ಮೊದಲು ಇದ್ದಳು. ಪೈಲೆಟ್ ಆಗುವ ಕನಸನ್ನು ಹೊಂದಿದ್ದಳು. ಯಾವಾಗಲೂ ಮೊಬೈಲ್ ನಲ್ಲಿ ಪೈಲೆಟ್‌ಗೆ ಸಂಬಂಧಿಸಿದ ಫೋಟೋಗಳನ್ನು ಹಾಕುತ್ತಿದ್ದಳು ಎಂದು ಮೃತ ಬಾಲಕಿ ಅಕ್ಷಯಾ ತಂದೆ ನರಸಿಂಹ ಮೂರ್ತಿ ಹೇಳುತ್ತಾ ಕಣ್ಣೀರಿಟ್ಟರು.

## 3 ಅಡಿಯ ಡಿವೈಡರ್ ಎತ್ತರಿಸಲು ಆಯುಕ್ತರ ಸೂಚನೆ



ಮಳೆಯಿಂದ ಹೆಬ್ಬಾಳ ಪೊಲೀಸ್ ಠಾಣೆ ಬಳಿ ಇರುವ ಕೆಳ ಸೇತುವೆ ಜಲಾವೃತಗೊಂಡಿರುವುದು.

**ಬೆಂಗಳೂರು:** ಅಪಘಾತ ನಡೆದ ಸ್ಥಳಕ್ಕೆ ಬಿಬಿಎಂಪಿ ಆಯುಕ್ತ ಗೌರವ್ ಗುಪ್ತಾ ಭೇಟಿ ನೀಡಿ, ಘಟನೆಯ ಬಗ್ಗೆ ಪರಿಶೀಲಿಸಿ ಮೂರು ಅಡಿ ಇರುವ ಡಿವೈಡರ್ ಅನ್ನು ಮತ್ತಷ್ಟು ಎತ್ತರ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರತಿ ಗಂಟೆಗೆ 30 ಸಾವಿರ ವಾಹನಗಳು ಓಡಾಡುವ ಮುಖ್ಯ ರಸ್ತೆ ಇದಾಗಿದ್ದು, ಮೂರು ಅಡಿ ಎತ್ತರವಿರುವ ಡಿವೈಡರ್ ಅನ್ನು ಇವರು ದಾಟಿ ಬರುವಾಗ ಏಕಾಏಕಿ ವಾಹನ ಬಡಿದು ಆಚಾತುರ್ಯ ಘಟನೆ ಸಂಭವಿಸಿದೆ.

ಅಂಡರ್ ಗ್ರೌಂಡ್ ಸಬ್ ವೇ ಕಾಮಗಾರಿ ನಡೆಯುತ್ತಿದೆ. ಆದ್ದರಿಂದ ಮಳೆ ಬಂದರೆ ನೀರು ನಿಲ್ಲುವುದು ಸಹಜ. ಸಿಸಿಟಿವಿ, ತನಿಖೆ ಪ್ರಕಾರ ಮಾಹಿತಿಯನು ಪಡೆದುಕೊಂಡು ಕ್ರಮ ಕೈಗೊಳ್ಳಲಾಗುವುದು ಎಂದರು.

**ಪರಿಹಾರ:** ಈ ಮಧ್ಯೆ, ಹೆಬ್ಬಾಳ ಶಾಸಕ ಬೈರತಿ ಸುರೇಶ್, ಮೃತ ಬಾಲಕಿ ಕುಟುಂಬಕ್ಕೆ ವೈಯಕ್ತಿಕವಾಗಿ 2 ಲಕ್ಷ ರೂ. ಪರಿಹಾರ ಘೋಷಿಸಿದ್ದು, ಪ್ರಕರಣದ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಲು ಆಗ್ರಹಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ



# ನಗರಕ್ಕೆ ತಂಪೆರೆದ ಸಂಜೆ ಮಳೆ

**ಬೆಂಗಳೂರು:** ಕಳೆದ ಕೆಲವು ದಿನಗಳಿಂದ ಬಿಸಿಲಿನ ಬೇಗೆಯಲ್ಲಿ ಪರಿತಪಿಸಿದ್ದ ನಗರದ ಜನರಿಗೆ ಸೋಮವಾರ ಸಂಜೆ ಮಳೆ ತುಸು ತಂಪೆರೆಯಿತು.

ಮಧ್ಯಾಹ್ನ 3 ಗಂಟೆಯಿಂದಲೇ ಮೋಡ ಕವಿದ ವಾತಾವರಣವಿದ್ದು, ತಂಗಾಳಿ ಬೀಸುತ್ತಿತ್ತು. ಸಂಜೆ ನಾಲ್ಕರ ನಂತರ ನಗರದ ಅಲ್ಲಲ್ಲಿ ಮಳೆ ಸುರಿಯಿತು. ನಗರದ ಹಲವೆಡೆ ಗುಡುಗು ಸಹಿತ ಮಳೆಯಾಗಿದ್ದು, ಕೆಲವೆಡೆ ಮರಗಳು ಕೂಡ ಧರೆಗುರುಳಿವೆ.

- ನಗರದ ಹಲವೆಡೆ ಗುಡುಗು ಸಹಿತ ಮಳೆ
- ಅಂಡರ್‌ಪಾಸ್‌ಗಳು ಜಲಾವೃತ, ಧರೆಗುರುಳಿದ ಮರಗಳು

ಹಲವು ಅಂಡರ್ ಪಾಸ್ ಮತ್ತು ಕೆಲವು ರಸ್ತೆಗಳಲ್ಲಿ ಒಂದೆರಡು ಗಂಟೆ ಕಾಲ ನೀರು ನಿಂತಿತ್ತು. ಇದರಿಂದ ಕೆಲಸ ಮುಗಿಸಿ ಕಚೇರಿಯಿಂದ ಮನೆಗೆ ತೆರಳುತ್ತಿದ್ದ ಬೈಕ್ ಸವಾರರು ಮನೆ ತಲಪುವಷ್ಟರಲ್ಲಿ ಪರದಾಡುವಂತಾಯಿತು. ಕಾವೇರಿ ಥಿಯೇಟರ್, ರೇಸ್‌ಕೋರ್ಸ್ ಸೇರಿದಂತೆ ಹಲವು ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿದ್ದರಿಂದ ಮತ್ತು ಸಂಜೆ ವೇಳೆ ಕತ್ತಲಾಗಿದ್ದರಿಂದ ಸಂಚಾರ ಅಸ್ತವ್ಯಸ್ತವಾಗಿತ್ತು.





**ಧರೆಗುರುಳಿದ ಮರ:** ಯಲಚೇನಹಳ್ಳಿ, ಫೈವ್‌ಲೈನ್ ರಸ್ತೆ ಹಾಗೂ ಸದಾಶಿವನಗರದಲ್ಲಿ ತಲಾ ಒಂದು ಮರ ಧರೆಗುರುಳಿವೆ. ಸದಾಶಿವನಗರ ಸೇರಿದಂತೆ ಕೆಲವೆಡೆ ಮರದ ಕೊಂಬೆಗಳು ಸಹ ಮುರಿದು ಬಿದ್ದಿದ್ದು, ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ದೂರು ಬಂದ ಕಡೆ ಬಿದ್ದಿದ್ದ ಮರ ಮತ್ತು ಕೊಂಬೆಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

**ಎಚ್. ಗೊಲ್ಲಹಳ್ಳಿಯಲ್ಲಿ ಅತಿ ಹೆಚ್ಚು ಮಳೆ:** ನಗರದ ಎಚ್. ಗೊಲ್ಲಹಳ್ಳಿಯಲ್ಲಿ ಅತಿ ಹೆಚ್ಚು ಮಳೆಯಾಗಿದ್ದು 27 ಮಿ.ಮೀ. ಮಳೆಯಾಗಿದೆ, ನಂತರ ಬೆಂ.ದಕ್ಷಿಣದ ತರಳು 21.5 ಮಿ.ಮೀ., ಕಾಚೋಹಳ್ಳಿ 3.5 ಮಿ.ಮೀ., ಜ್ಞಾನಭಾರತಿ ಆವರಣ 4.5ಮಿ.ಮೀ., ಕೊಡಿಗೆಹಳ್ಳಿ 3ಮಿ.ಮೀ., ನಾಗರಬಾವಿ 4.5, ಲಕ್ಕಸಂದ್ರ 21, ಕೋರಮಂಗಲ 11.5, ಎಚ್‌ಎಸ್‌ಆರ್ ಲೇಔಟ್ 7.5, ಹೆಮ್ಮಿಗಪುರ 8.5, ಕೆ.ಜಿ.ಹಳ್ಳಿ 11, ರಾಮೋಹಳ್ಳಿ 5, ರಾಜರಾಜೇಶ್ವರಿ ನಗರ 4.5, ನಾಯಂಡಹಳ್ಳಿ 4, ಚಿಕ್ಕನಹಳ್ಳಿ 11.5, ಚೋಳನಾಯಕನಹಳ್ಳಿ 5.5, ಕಗ್ಗಲೀಪುರ 13.5, ಅಂಜನಾಪುರ 16, ದೊಮ್ಮಲೂರು 4 ಮತ್ತು ಸಂಪಂಗಿ ರಾಮನಗರ 13.2 ಮಿ.ಮೀ. ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**2 ದಿನ ಮಳೆ ನಿರೀಕ್ಷೆ:** ಅಂಡಮಾನ್ ದ್ವೀಪ ಸಮುದ್ರದಲ್ಲಿ ವಾಯುಭಾರ ಕುಸಿತ ತೀವ್ರಗೊಂಡ ಪರಿಣಾಮ ಬೆಂಗಳೂರು ನಗರ ಮತ್ತು ಗ್ರಾಮಾಂತರದ ಹಲವು ಪ್ರದೇಶಗಳಲ್ಲಿ ಮಾ.23ರ ವರೆಗೆ ಇದೇ ರೀತಿ ಗುಡುಗು ಸಹಿತ ಮಳೆ ಮುಂದುವರಿಯುವ ನಿರೀಕ್ಷೆ ಇದೆ. ಮೋಡ ಕವಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಸ್ಕೈವಾಕ್ ಹತ್ತಲು ಎಸ್ಕಲೇಟರ್ ನಿರ್ಮಾಣ

## ಪೈಲೆಟ್ ಯೋಜನೆ ಯಶಸ್ವಿಯಾದರೆ ಪಿಪಿಪಿ ಮಾದರಿಯಡಿ ವಿವಿಧೆಡೆ ಅಳವಡಿಕೆ

• ತೃಪ್ತಿ ಕುಮ್ರಗೋಡು

**ಬೆಂಗಳೂರು:** ನಗರದ ಸ್ಕೈ ವಾಕ್‌ಗಳಲ್ಲಿ ಮೆಟ್ಟಿಲು ಹತ್ತಿ ಇಳಿಯಲು ಕಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ಇದೀಗ ಬಿಬಿಎಂಪಿ ನಗರದಲ್ಲಿ ಪಿಪಿಪಿ ಮಾಡೆಲ್ ಮೂಲಕ ಎಸ್ಕಲೇಟರ್ ನಿರ್ಮಿಸಲು ಮುಂದಾಗಿದೆ.

ಸಾರ್ವಜನಿಕ ಸಹಭಾಗಿತ್ವದಲ್ಲಿ ಬಿಬಿಎಂಪಿ ವ್ಯಾಪ್ತಿಯ ಸ್ಕೈ ವಾಕ್‌ಗಳಲ್ಲಿ ಎಸ್ಕಲೇಟರ್ ಅಳವಡಿಸಲು ಪಾಲಿಕೆ ಮುಂದಾಗಿದ್ದು, ಪ್ರಾಯೋಗಿಕವಾಗಿ ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆ ಮುಂಭಾಗದ ಸ್ಕೈ ವಾಕ್ ಎರಡು ಭಾಗದಲ್ಲಿ ಎಸ್ಕಲೇಟರ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ ಒಂದು ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರ ಬಳಕೆಗೆ ಸಿದ್ಧವಾಗಲಿದೆ.

ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆ ಸಮೀಪದ ಸ್ಕೈ ವಾಕ್‌ನಲ್ಲಿ ಎರಡು ಕಡೆಯಲ್ಲಿ ಎಸ್ಕಲೇಟರ್ ನಿರ್ಮಾಣವಾಗುತ್ತಿದೆ. 5.5 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಇದರ ಸಂಪೂರ್ಣ ವೆಚ್ಚವನ್ನು ಪಿಪಿಪಿ ಮಾಡೆಲ್ ಮೂಲಕ ಅಕಾರ್ಡ್ ಡಿಸ್ಪ್ಲೇಸ್ ಪ್ರೈವೇಟ್ ಲಿಮಿಟೆಡ್ ಭರಿಸಲಿದೆ. ಮುಂದಿನ 20 ವರ್ಷಗಳ ಇದರ ನಿರ್ವಹಣೆ ಜವಾಬ್ದಾರಿ ಈ ಸಂಸ್ಥೆ ಮಾಡಲಿದೆ. ಇಲ್ಲಿನ ಜಾಹೀರಾತಿನಲ್ಲಿ ಬರುವ ಆದಾಯ ಖಾಸಗಿ ಸಂಸ್ಥೆಗೆ ಹೋಗಲಿದೆ. ಬಿಬಿಎಂಪಿಯಿಂದ ಯಾವುದೇ ರೀತಿಯಾದ ಅನುದಾನ ಎಸ್ಕಲೇಟರ್ ನಿರ್ಮಾಣಕ್ಕೆ ಬಳಕೆಯಾಗುತ್ತಿಲ್ಲ.





ಈ ಮಾರ್ಗದಲ್ಲಿ, ವಿಶೇಷವಾಗಿ ಬೆಳಗ್ಗೆ ಮತ್ತು ಸಂಜೆ ಶಾಲಾ ಕಾಲೇಜು ಮತ್ತು ಕಚೇರಿಗಳು ಆರಂಭವಾಗುವ ಮುಂಚೆ ಮತ್ತು ಮುಗಿದ ನಂತರ ವಾಹನ ದಟ್ಟಣೆ ಹೆಚ್ಚಾಗಿ ಪಾದಚಾರಿಗಳು ರಸ್ತೆ ದಾಟಲು 10ರಿಂದ 15 ನಿಮಿಷಗಳ ಕಾಲ ಕಾಯಬೇಕಾಗುತ್ತದೆ. ಸ್ಕೈ ವಾಕ್‌ನಲ್ಲಿ ಮೆಟ್ಟಿಲು ಹತ್ತಬೇಕಾಗುತ್ತದೆ ಎಂಬ ಕಾರಣಕ್ಕೆ ಹಿರಿಯ ನಾಗರಿಕರು ಹಾಗೂ ಮಹಿಳೆಯರು ಸ್ಕೈ ವಾಕ್ ಬಳಕೆ ಮಾಡುತ್ತಿಲ್ಲ. ಹೀಗಾಗಿ, ಎಸ್ಕಲೇಟರ್ ಅಳವಡಿಕೆ ಜನರಿಗೆ ಉಪಯೋಗವಾಗಲಿದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ.



### ಸ್ಕೈವಾಕ್ ಬಳಕೆ ಇಲ್ಲ

ಕ್ಷಯ ರೋಗ ಸಂಸ್ಥೆಯ ಸಮೀಪದ ಸ್ಕೈ ವಾಕ್‌ನಲ್ಲಿ ಸುಮಾರು 30 ನಿಮಿಷದ ಅವಧಿಯಲ್ಲಿ ಸುಮಾರು 30ರಿಂದ 40 ಪ್ರಯಾಣಿಕರು ಬಸ್ಸಿನಿಂದ ಇಳಿದಿದ್ದಾರೆ. ಅವರಲ್ಲಿ ಯಾರೊಬ್ಬರೂ ಸ್ಕೈ ವಾಕ್ ಬಳಕೆ ಮಾಡಿಲ್ಲ. ಅವರಲ್ಲಿ 15ರಿಂದ 40 ವರ್ಷದವರು ಅಧಿಕವಾಗಿದ್ದಾರೆ. ಸ್ಕೈ ವಾಕ್‌ನ ಒಂದು ತುದಿಯಿಂದ ಇನ್ನೊಂದು ತುದಿಗೆ ಸುಮಾರು 70ಕ್ಕೂ ಅಧಿಕ ಮೆಟ್ಟಿಲು ಇವೆ. ಇದನ್ನು ಬಳಸಿಕೊಂಡು ರಸ್ತೆ ದಾಟಲು ಸುಮಾರು 5ರಿಂದ 6 ನಿಮಿಷ ಸಾಕು. ಆದರೆ ಪ್ರಯಾಣಿಕರು ಮಾತ್ರ 10ರಿಂದ 15 ನಿಮಿಷ ಕಾದು ರಸ್ತೆ ದಾಟುತ್ತಾರೆ ಎಂದು ತಿಳಿಸುತ್ತಾರೆ.

ಸಾಮಾನ್ಯವಾಗಿ ಈ ಮಾರ್ಗದಲ್ಲಿ ಸ್ಕೈ ವಾಕ್ ಇದ್ದರೂ ಉಪಯೋಗಿಸುವವರ ಸಂಖ್ಯೆ ತೀರ ಕಡಿಮೆ ಇದೆ. ಏಕೆಂದರೆ ಸುಮಾರು 70ಕ್ಕೂ ಅಧಿಕ ಮೆಟ್ಟಿಲು ಹತ್ತಿ ಇಳಿಯುವುದು ನಮ್ಮಂತಹ ಹಿರಿಯ ನಾಗರಿಕರಿಗೆ ಸಾಧ್ಯವಾಗದು. ಈ ಹಿನ್ನೆಲೆಯಲ್ಲಿ ನಾವು ರಸ್ತೆ ದಾಟಿಕೊಂಡೇ ಹೋಗಬೇಕಾಗುತ್ತದೆ. ಇದೀಗ ಎಸ್ಕಲೇಟರ್ ನಿರ್ಮಾಣವಾಗುತ್ತಿರುವುದು ಸಂತಸ.

• ಸೋಮನಾಥ, ಪಾದಚಾರಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ಪಿಪಿಪಿ ಮಾಡೆಲ್ ಮೂಲಕ ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆ ಸಮೀಪದ ಸ್ಕೈ ವಾಕ್‌ಗೆ ಎಸ್ಕಲೇಟರ್ ಅಳವಡಿಸಲಾಗುತ್ತದೆ. ಇದರ ನಿರ್ವಹಣೆ ಜವಾಬ್ದಾರಿ ಹಾಗೂ ಕಾಮಗಾರಿ ವೆಚ್ಚವನ್ನು ಖಾಸಗಿ ಸಂಸ್ಥೆ ವಹಿಸಲಿದೆ. ಮೊದಲ ಪ್ರಾಯೋಗಿಕ ಯೋಜನೆಯಾಗಿ ಆಯ್ಕೆ ಮಾಡಿದ್ದು, ಇದು ಯಶಸ್ವಿಯಾದರೆ ಉಳಿದೆಡೆಯೂ ಈ ಯೋಜನೆಯ ಮೂಲಕ ಎಸ್ಕಲೇಟರ್ ನಿರ್ಮಿಸುವ ಚಿಂತನೆಯಿದೆ.

• ಪ್ರವೀಣ್ ಲಿಂಗಯ್ಯ, ಸಹಾಯ ಎಂಜಿನಿಯರ್

ಹೆಬ್ಬಾಳ ಮೇಲ್ಸೇತುವೆ ಬಳಿ ಬಿಬಿಎಂಪಿ ಕಸದ ಲಾರಿಯ ಆಟಾಟೋಪಕ್ಕೆ ಶಾಲಾ ಬಾಲಕಿಯೊಬ್ಬಳು ಮೃತ

# ಬಿಬಿಎಂಪಿ ಕಸದ ಲಾರಿಗೆ ಬಾಲಕಿ ಬಲಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಹೆಬ್ಬಾಳ ಮೇಲ್ಸೇತುವೆ ಬಳಿ ಬಿಬಿಎಂಪಿ ಕಸದ ಲಾರಿಯ ಆಟಾಟೋಪಕ್ಕೆ ಶಾಲಾ ಬಾಲಕಿಯೊಬ್ಬಳು ಮೃತಪಟ್ಟಿದ್ದು, ಎಂಟು ಮಂದಿ ಗಾಯಗೊಂಡಿದ್ದಾರೆ. ಎರಡು ವಾಹನಗಳು ಜಖಂಗೊಂಡಿವೆ.



ಸಂಜಯನಗರದ ಸ್ಟೆಲ್ಲಾ ಮೇರಿಸ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಅಕ್ಷಯಾ (15) ಸಾವನ್ನಪ್ಪಿದ್ದು, 8 ಮಂದಿಗೆ ಗಂಭೀರ ಗಾಯಗೊಂಡಿದ್ದಾರೆ. ಈ ಅಪಘಾತದಿಂದ ಹೆಬ್ಬಾಳ ಸೇತುವೆ ಬಳಿ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಹೆಬ್ಬಾಳ ಸಂಚಾರ ವಿಭಾಗದ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಿದರು.

ಹೆಬ್ಬಾಳ ಮೇಲ್ಸೇತುವೆ ಬಳಿಯ ಅಂಡರ್ ಪಾಸ್‌ನಲ್ಲಿ ನೀರು ತುಂಬಿದ್ದ ಪರಿಣಾಮ ಪಾದಚಾರಿಗಳು ರಸ್ತೆ ಮೇಲೆ ಓಡಾಡುತ್ತಾ ರಸ್ತೆ ದಾಟುತ್ತಿದ್ದರು. ಮಧ್ಯಾಹ್ನ 12.30ರ ವೇಳೆಗೆ ಬಸ್ ಇಳಿದ ಬಾಲಕಿ ಅಕ್ಷಯಾ ತನ್ನ ಐವರು ಸ್ನೇಹಿತರೊಂದಿಗೆ ಅಂಡರ್ ಪಾಸ್‌ನಲ್ಲಿ ನೀರು ತುಂಬಿರುವುದನ್ನು ನೋಡಿ, ಡಿವೈಡರ್ ದಾಟಿ ರಸ್ತೆ ಮೂಲಕ ಮತ್ತೊಂದು ಬದಿಗೆ ಹೋಗುತ್ತಿದ್ದಳು. ಈ ವೇಳೆ ರಸ್ತೆಯಲ್ಲಿ ಬರುತ್ತಿದ್ದ ಕಾರು ಮತ್ತು ಬೈಕ್, ವಿದ್ಯಾರ್ಥಿನಿಯರು ರಸ್ತೆ ದಾಟುತ್ತಿರುವುದನ್ನು ನಿಂತಿತ್ತಾದರೂ ಹಿಂದಿನಿಂದ ವೇಗವಾಗಿ ಬರುತ್ತಿದ್ದ ಬಿಬಿಎಂಪಿ ಕಸದ ಲಾರಿ, ಕಾರು, ಬೈಕ್‌ಗೆ ಡಿಕ್ಕಿಯಾಗಿ ಬಾಲಕಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬಾಲಕಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇತರೆ ಎಂಟು ಜನರಿಗೆ ಗಂಭೀರ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಅಪಘಾತದಲ್ಲಿ ಬೈಕ್ ಸವಾರನ ಕಾಲು ಮುರಿದಿದೆ. ಬೇರೆ ಯಾರಿಗೂ ಗಂಭೀರ ಗಾಯವಾಗಿಲ್ಲ, ಕಸದ ಲಾರಿ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರ್.ಟಿ.ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಡರ್‌ಪಾಸ್‌ನಲ್ಲಿ ನೀರು ತುಂಬಿರುವ ಬಗ್ಗೆ ಪೊಲೀಸರು ಸೋಮವಾರ ಮುಂಜಾನೆಯೇ ಬಿಬಿಎಂಪಿಗೆ ಮಾಹಿತಿ ನೀಡಿದ್ದರು. ಆದರೆ, ಯಾವುದೇ ಸಿಬ್ಬಂದಿ ನೀರು ತೆಗೆಯುವ ಕೆಲಸ ಮಾಡಿರಲಿಲ್ಲ, ಹೀಗಾಗಿ ಸಾರ್ವಜನಿಕರು ಡಿವೈಡರ್ ಹತ್ತಿ ರಸ್ತೆ ದಾಟುತ್ತಿದ್ದರು. ಈ ವೇಳೆ ದುರಂತ ಸಂಭವಿಸಿದೆ

## ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಜನರ ಕಿಡಿ

ಪೊಲೀಸರು ಮಾಹಿತಿ ನೀಡಿದ್ದರೂ ಎಚ್ಚೆತ್ತುಕೊಳ್ಳದೆ ನಿರ್ಲಕ್ಷ್ಯ ವಹಿಸಿದ ಬಿಬಿಎಂಪಿ ಅಧಿಕಾರಿಗಳು ಮತ್ತು ಸಿಬ್ಬಂದಿ ವಿದ್ಯಾರ್ಥಿನಿ ಅಪಘಾತಕ್ಕೆ ಬಲಿಯಾದ ಕೂಡಲೇ ಎಚ್ಚೆತ್ತು ಅಂಡರ್ ಪಾಸ್‌ನಲ್ಲಿ ನಿಂತಿದ್ದ ಮಳೆ ನೀರನ್ನು ತೆರವುಗೊಳಿಸಿದರು. ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೆಬ್ಬಾಳದಲ್ಲಿ ಪ್ರತಿ ದಿನ ಜನರು ರಸ್ತೆ ದಾಟಲು ಅಂಡರ್ ಪಾಸ್ ಬಳಸುತ್ತಾರೆ. ಆದರೆ ಭಾನುವಾರ ರಾತ್ರಿ ಬಿದ್ದ ಮಳೆಯಿಂದಾಗಿ ಅಂಡರ್‌ಪಾಸ್ ಒಳಗೆ ಸುಮಾರು 1 ಅಡಿ ನೀರು ನಿಂತಿತ್ತು. ಹಾಗಾಗಿ ಜನರು ಅಂಡರ್‌ಪಾಸ್‌ನಲ್ಲಿ ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಇತ್ತೀಚೆಗೆ ಎಂ.ಎಸ್. ಪಾಳ್ಯದಲ್ಲಿ ರಸ್ತೆ ಗುಂಡಿಗೆ ಯುವಕ ಬಲಿಯಾದ ಬಳಿಕ ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ರಸ್ತೆಗೆ ಡಾಂಬರು ಹಾಕಿದ್ದರು. ಅದೇ ರೀತಿ ಇಲ್ಲಿಯೂ ವಿದ್ಯಾರ್ಥಿನಿ ಅಪಘಾತದಲ್ಲಿ ಮೃತಪಡುವವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಬಿಬಿಎಂಪಿಯವರು ಮೊದಲೇ ಎಚ್ಚೆತ್ತುಕೊಂಡಿದ್ದರೆ ಬಾಲಕಿಯ ಜೀವ ಉಳಿಸಬಹುದಿತ್ತು ಎಂದು ಕಿಡಿ ಕಾರಿದ್ದಾರೆ.

## ಕೆಳಗೆ ಕುಳಿತಿದ್ದ ವ್ಯಕ್ತಿ ಮೇಲೆ ಹರಿದ ಲಾರಿ: ಸ್ಥಳದಲ್ಲೇ ಸಾವು

**ಬೆಂಗಳೂರು:** ಮಳೆ ಸುರಿಯುತ್ತಿದ್ದ ಪರಿಣಾಮ ಲಾರಿ ಕೆಳಗೆ ಕುಳಿತಿದ್ದ ವ್ಯಕ್ತಿಯ ಮೇಲೆ ಅದೇ ಲಾರಿ ಹರಿದು ಆತ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಅಶೋಕನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

- ಜೋರಾಗಿ ಮಳೆ ಬರುತ್ತಿದ್ದರಿಂದ ಇಮ್ಯಾನುವೆಲ್ ಲಾರಿಗೆ ಕೆಳಗೆ ಕುಳಿತಿದ್ದ ವ್ಯಕ್ತಿ
- ಇದನ್ನು ಗಮನಿಸದ ಲಾರಿ ಚಾಲಕ ಲಾರಿ ಚಲಾಯಿಸಿದ್ದಾನೆ

ಎಲ್.ಆರ್.ನಗರ ನಿವಾಸಿ ಇಮ್ಯಾನುವೆಲ್ (40) ಮೃತ ದುರ್ದೈವಿ. ಭಾನುವಾರ ರಾತ್ರಿ ಕ್ರೇನ್ ಸ್ಥಳಾಂತರ ಮಾಡುವ ದೊಡ್ಡ ಲಾರಿಯನ್ನು ವಿವೇಕನಗರದ 4ನೇ ಮುಖ್ಯರಸ್ತೆಯಲ್ಲಿ ನಿಲುಗಡೆ ಮಾಡಲಾಗಿತ್ತು. ಈ ವೇಳೆ ಜೋರಾಗಿ ಮಳೆ ಬರುತ್ತಿದ್ದರಿಂದ ಇಮ್ಯಾನುವೆಲ್ ಲಾರಿಗೆ ಕೆಳಗೆ ಕುಳಿತಿದ್ದ. ಇದನ್ನು ಗಮನಿಸದ ಲಾರಿ ಚಾಲಕ ರಾತ್ರಿ 12 ಗಂಟೆ ಸುಮಾರಿಗೆ ಲಾರಿ ಚಲಾಯಿಸಿದ್ದಾನೆ. ಈ ವೇಳೆ ಲಾರಿ ಕೆಳಗೆ ಆಶ್ರಯ ಪಡೆದಿದ್ದ ಇಮ್ಯಾನುವೆಲ್ ಮೇಲೆಯೇ ಚಕ್ರ ಹರಿದು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಘಟನೆ ಸಂಬಂಧ ಲಾರಿ ಚಾಲಕ ತಮಿಳುನಾಡು ಮೂಲದ ಅಂಜುಮಣಿ ಎಂಬಾತನನ್ನು ಬಂಧಿಸಿ, ಲಾರಿಯನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಶೋಕನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಸದ ಲಾರಿ ಡಿಕ್ಕಿ ವಿದ್ಯಾರ್ಥಿನಿ ಸಾವು

**ಸಂಕ. ಸಮಾಚಾರ, ಬೆಂಗಳೂರು**

ರಸ್ತೆ ದಾಟುತ್ತಿದ್ದ ಶಾಲಾ ವಿದ್ಯಾರ್ಥಿನಿಗೆ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟಿರುವ ಘಟನೆ ಆರ್‌ಟಿ ನಗರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಕ್ಷಯಾ (14) ಮೃತಪಟ್ಟ ವಿದ್ಯಾರ್ಥಿನಿ. ಘಟನೆಯಲ್ಲಿ ಆರು ಮಂದಿ ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೆಬ್ಬಾಳದ ಬಳಿ ಪಾದಚಾರಿಗಳಿಗಾಗಿ ನಿರ್ಮಿಸಿರುವ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ಬೆಂಗಳೂರು-ಬಳ್ಳಾರಿ ಹೆದ್ದಾರಿಯ ಹೆಬ್ಬಾಳ ಪೊಲೀಸ್ ಠಾಣೆ ಎದುರು ಮಧ್ಯಾಹ್ನ 12.30ರ ಸುಮಾರಿನಲ್ಲಿ ರಸ್ತೆ ವಿಭಜಕದ ಮೂಲಕ ರಸ್ತೆ ದಾಟುತ್ತಿದ್ದ ವೇಳೆ ಮೇಖ್ರಿ ಸರ್ಕಲ್ ಕಡೆಯಿಂದ ಬಂದ ಬಿಬಿಎಂಪಿ ಕಸದ ಲಾರಿ ಏಕಾಏಕಿ ನುಗ್ಗಿ ವಿದ್ಯಾರ್ಥಿನಿ ಅಕ್ಷಯಾಗೆ ಡಿಕ್ಕಿ ಹೊಡೆದಿದೆ. ಗಂಭೀರ ಗಾಯಗೊಂಡ ಆಕೆಯನ್ನು ತಕ್ಷಣ ಯಲಹಂಕ ಆಸ್ಪತ್ರೆಗೆ ಕರೆದೊಯ್ದರಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾಳೆ.

ಲಾರಿ ಅಕ್ಷಯಾಳಿಗೆ ಡಿಕ್ಕಿ ಹೊಡೆದಿರುವುದು ಮಾತ್ರವಲ್ಲದೆ ಮುಂದೆ ಹೋಗುತ್ತಿದ್ದ ದ್ವಿಚಕ್ರ ವಾಹನ ಹಾಗೂ ಕಾರುಗಳಿಗೂ ಡಿಕ್ಕಿ ಹೊಡೆದಿದೆ. ಇದರಿಂದ ಬೈಕ್ ಹಾಗೂ ಕಾರಿನಲ್ಲಿದ್ದವರಿಗೂ ಗಾಯಗಳಾಗಿವೆ ಎಂದು ಡಿಸಿಪಿ ಸವಿತಾ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಸದಾಶಿವನಗರದ ಸ್ಟೆಲ್ಲಾ ಮೇರಿಸ್ ಶಾಲೆಯಲ್ಲಿ ಅಕ್ಷಯಾ 9ನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಸುದ್ದಿ ತಿಳಿದು ಆರ್ ನಗರ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದು, ನಾಪತ್ತೆಯಾಗಿರುವ ಲಾರಿ ಚಾಲಕನಿಗಾಗಿ ಹುಡುಕಾಟ ನಡೆಸಿದ್ದಾರೆ.

**ಅಪರಾಧ ಸುದ್ದಿ**

## ರಸ್ತೆ ವಿಭಜಕ ಮತ್ತಷ್ಟು ಎತ್ತರ

ಕಸದ ಲಾರಿಯೊಂದು ವಿದ್ಯಾರ್ಥಿನಿಗೆ ಡಿಕ್ಕಿ ಹೊಡೆದು ಆಕೆ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದ ನಂತರ ಬಿಬಿಎಂಪಿ ಎಚ್ಚೆತ್ತುಕೊಂಡು ರಸ್ತೆ ವಿಭಜಕವನ್ನು ಎತ್ತರಿಸಲು ಮುಂದಾಗಿದೆ. ಘಟನೆ ನಡೆದ ಸ್ಥಳಕ್ಕೆ ಶಾಸಕ ಬೈರತಿ ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ಪಾಲಿಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ರಸ್ತೆ ವಿಭಜಕದ ಎತ್ತರ ಕಡಿಮೆ ಇರುವುದರಿಂದ ಜನರು ಕೆಳಸೇತುವೆ ಬಳಕೆ ಮಾಡದೆ ರಸ್ತೆ ವಿಭಜಕವನ್ನು ಹತ್ತಿ ರಸ್ತೆ ದಾಟುತ್ತಿರುವುದರಿಂದ ಅನಾಹುತ ಸಂಭವಿಸಿದೆ. ವಿದ್ಯಾರ್ಥಿನಿ ಸಾವು ದುರದೃಷ್ಟಕರವಾಗಿದೆ. ವಿಭಜಕವನ್ನು ಮತ್ತಷ್ಟು ಎತ್ತರಿಸಲಾಗುತ್ತದೆ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದ್ದಾರೆ. ಕೆಳಸೇತುವೆ ಮಾತ್ರವಲ್ಲದೆ ಸ್ಕೈವಾಕ್ ಕೂಡಾ ನಿರ್ಮಾಣವಾಗಿದೆ. ಇದನ್ನು ಜನರು ಬಳಕೆ ಮಾಡಿಕೊಳ್ಳಬಹುದಾಗಿತ್ತು ಎಂದಿದ್ದಾರೆ.

## ಚಾಲಕನ ನಿರ್ಲಕ್ಷ್ಯವೇ ಕಾರಣ

ಸ್ಥಳೀಯರ ಪ್ರಕಾರ ಚಾಲಕನ ನಿರ್ಲಕ್ಷ್ಯವೇ ಕಾರಣ. ಅತಿ ವೇಗವಾಗಿ ಬಂದ ಚಾಲಕ ಬಾಲಕಿಯನ್ನು ಗಮನಿಸಿಯೂ ವೇಗ ನಿಯಂತ್ರಣ ಮಾಡಲಾಗದೆ ಡಿಕ್ಕಿ ಹೊಡೆದಿದ್ದಾನೆ. ಈ ಭಾಗದಲ್ಲಿ ವಾಹನಗಳು ನಿಧಾನವಾಗಿ ಚಲಿಸುವುದೇ ಇಲ್ಲ. ಇದರಿಂದ ಪಾದಚಾರಿಗಳಿಗೆ ಮಾತ್ರವಲ್ಲದೆ ಇನ್ನಿತರ ವಾಹನಗಳಿಗೂ ಸಂಕಷ್ಟ ಎದುರಾಗಿದೆ ಎಂದು ಹೇಳುತ್ತಾರೆ. ಇನ್ನು ಪಾದಚಾರಿಗಳಿಗಾಗಿ ನಿರ್ಮಾಣ ಮಾಡಿರುವ ಕೆಳಸೇತುವೆಯಲ್ಲಿ ಮಳೆಗಾಲದಲ್ಲಿ ನೀರು ನುಗ್ಗುತ್ತದೆ. ಇದರಿಂದ ಜನತೆ ರಸ್ತೆ ವಿಭಜಕ ದಾಟುತ್ತಿದ್ದಾರೆ ಎಂದು ದೂರುತ್ತಾರೆ.

ವಾಯುಭಾರ ಕುಸಿತ-ಅಕಾಲಿಕ ಮಳೆ | ಸಂಜೆ 4ರಿಂದ 6ರವರೆಗೆ ವರುಣನ ಆರ್ಭಟ

# ದಿಢೀರ್ ಮಳೆಗೆ ವಾಹನ ಸವಾರರ ಪರದಾಟ

- ರಸ್ತೆಗಳಲ್ಲಿ ಮಳೆ ನೀರು ತುಂಬಿ ವಾಹನ ಸಂಚಾರಕ್ಕೆ ಅಡ್ಡಿ
- ಗಾಳಿಗೆ ಮುರಿದುಬಿದ್ದ ರೆಂಬೆಕೊಂಬೆಗಳು



ಸಂಜೆ ಬಿದ್ದ ದಿಢೀರ್ ಮಳೆಯ ನಂತರ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆ ಮೇಲೆ ವಾಹನ ಸವಾರರು ಪರದಾಡಿದರು.

**ಸಂ.ಕ. ಸಮಾಚಾರ ಬೆಂಗಳೂರು**

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಅಕಾಲಿಕ ಮಳೆ ಮುಂದುವರೆದಿದ್ದು ಸೋಮವಾರ ಸಂಜೆ ಸುರಿದ ದಿಢೀರ್ ಮಳೆಗೆ ವಾಹನ ಸವಾರರು ಪರದಾಡಿದರು.

ಸಂಜೆ 4ರ ಸುಮಾರಿಗೆ ಮಳೆ ಆರಂಭವಾಗಿ ಸಂಜೆ 6ರವರೆಗೆ ವಿವಿಧ ಪ್ರದೇಶದಲ್ಲಿ ಸುರಿಯಿತು. ಇದರಿಂದ ದ್ವಿಚಕ್ರ ವಾಹನ ಸವಾರರು ಪರದಾಡಿದರು. ಕೆಲವೇ ನಿಮಿಷ ರಭಸವಾಗಿ ಮಳೆ ಸುರಿದಿದ್ದರಿಂದ ರಸ್ತೆಯಲ್ಲಿ ನೀರು ನಿಂತು ಕೆಲವು ರಸ್ತೆಗಳಲ್ಲಿ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ಮಳೆ ನಿಂತ ಕೆಲವು ನಿಮಿಷಗಳ ನಂತರ ನೀರು ಮೋರಿಗೆ ಹರಿದ ಬಳಿಕ ವಾಹನ ಸಂಚಾರ ಸುಗಮವಾಯಿತು. ಕೆಲವು ಕಡೆ ಗಾಳಿಯಿಂದಾಗಿ ರೆಂಬೆ ಕೊಂಬೆಗಳು ಮುರಿದು ವಾಹನ ಸಂಚಾರಕ್ಕೆ ಕೆಲ ಕಾಲ ಅಡ್ಡಿಯಾಯಿತು.

ಅದೇನಿದ್ದರೂ ಉರಿಬಿಸಿಲಿನ ನಡುವೆಯೂ ಅಕಾಲಿಕವಾಗಿ ಮಳೆ ಸುರಿದಿರುವುದರಿಂದ ಸಿಲಿಕಾನ್ ಸಿಟಿಯಲ್ಲಿ ತಂಪನೆಯ ವಾತಾವರಣ ಉಂಟಾಯಿತು. ಕಳೆದ ಕೆಲವು ದಿನಗಳಿಂದ ನಗರದ ಹಲವು ಭಾಗಗಳಲ್ಲಿ ಆಗಾಗ ತುಸು ಮಳೆ ಸುರಿಯುತ್ತಿದ್ದು ಅಲ್ಲಲ್ಲಿ ಮರಗಿಡಗಳು ಉರುಳಿವೆ. ಕೆಲವೆಡೆ ಮಳೆ ಸುರಿಯುತ್ತಿದ್ದರೆ ಇನ್ನೂ ಹಲವೆಡೆ ಮಳೆಯ ಸಿಂಚನವೇ ಇಲ್ಲದಿರುವುದು ಇಲ್ಲಿ ಗಮನಾರ್ಹ. ಹವಾಮಾನ ಇಲಾಖೆಯ ಮಾಹಿತಿಯಂತೆ ರಾಜಧಾನಿ ಬೆಂಗಳೂರಿನಲ್ಲಿ ಮಾರ್ಚ್ 24ರವರೆಗೂ ಮಳೆ ಸುರಿಯುವ ಸಂಭವವಿದೆ. ಕೆಲವೊಮ್ಮೆ ಅತಿ ಹೆಚ್ಚು ಮಳೆ ಸುರಿಯಬಹುದು.

ಮಳೆಯಿಂದ ರಕ್ಷಣೆ ಪಡೆಯಲು ಕೆಲವರು ಕೊಡೆ ಹಿಡಿದುಕೊಂಡೇ ನಗರದಲ್ಲಿ ಓಡಾಡುತ್ತಿದ್ದಾರೆ.



ಭಾನುವಾರ ರಾತ್ರಿ ಬಿದ್ದ ಮಳೆಯಿಂದಾಗಿ ಸದಾಶಿವನಗರದಲ್ಲಿ ಬೃಹತ್ ಮರ ಬುಡಮೇಲಾಗಿರುವುದು.



ಮೇಲ್ಮನೆಯಲ್ಲಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರು ಶೂನ್ಯ ವೇಳೆಯಲ್ಲಿ ಮಾತನಾಡಿದ ಸಂದರ್ಭ

# ಆಗಸ್ಟ್‌ನಲ್ಲಿ ಕೊರೊನಾ 4ನೇ ಅಲೆ

- ಐಐಟಿ ಕಾನ್ಪುರದಿಂದ ಮಾಹಿತಿ
- ದೇಶದಲ್ಲಿ ಲಸಿಕಾ ಪ್ರಗತಿ ಉತ್ತಮ
- ಒಳಾಂಗಣದಲ್ಲೂ ಮಾಸ್ಕ್ ಕಡ್ಡಾಯ

ವಿಧಾನ ಪರಿಷತ್ತು: ಮೂರು ಅಲೆಗಳ ಮೂಲಕ ಜನಸಾಮಾನ್ಯರನ್ನು ಕಂಗೆಡಿಸಿರುವ ಕೊರೊನಾ ಸೋಂಕಿನ ನಾಲ್ಕನೆ ಅಲೆ ಆಗಸ್ಟ್‌ನಲ್ಲಿ ದೇಶ ಪ್ರವೇಶಿಸಲಿದೆ.

ಮೇಲ್ಮನೆಯಲ್ಲಿ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಬಹಿರಂಗಪಡಿಸಿದ ಆರೋಗ್ಯ ಸಚಿವ ಡಾ. ಸುಧಾಕರ್, ನಾಲ್ಕನೇ ಅಲೆ ಬರುವುದು ಖಚಿತವಾಗಿದೆ. ಆದರೆ, ಇದರಿಂದ ಆತಂಕಗೊಳ್ಳುವುದು ಬೇಡ. ಕೊರೊನಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಿದರೆ ನಾಲ್ಕನೆ ಅಲೆಯನ್ನೂ ಎದುರಿಸಬಹುದು ಎಂದರು.

ಬಿಜೆಪಿ ಸದಸ್ಯ ಶಶೀಲ್ ನಮೋಶಿ ಅವರ ಪ್ರಸ್ತಾಪಕ್ಕೆ ಉತ್ತರ ನೀಡಿದ ಸಚಿವರು, ಕೊರೊನಾದ ರೂಪಾಂತರ ಉಪತಳಿ ಬಿ.ಎ.2 ಮೊದಲು ಫಿಲಿಪ್ಪೈನ್ಸ್‌ನಲ್ಲಿ ಕಾಣಿಸಿಕೊಂಡಿತ್ತು. ನಂತರ 40 ದೇಶಗಳಿಗೆ ಹರಡಿದೆ. ಈ ಮೊದಲು ಮೂರನೆ ಅಲೆ ಕಾಣಿಸಿಕೊಳ್ಳುವ ಮುನ್ಸೂಚನೆ ನೀಡಿದ ಕಾನ್ಪುರದ ಐಐಟಿ ಸಂಸ್ಥೆಯೇ ನಾಲ್ಕನೆ ಅಲೆಯ ಬಗ್ಗೆ ಮಾಹಿತಿ ನೀಡಿದೆ. ಬಹುತೇಕ ಆಗಸ್ಟ್‌ನಲ್ಲಿ ಕೋವಿಡ್ ನಾಲ್ಕನೆ ಅಲೆ ಬರುವ ಮುನ್ಸೂಚನೆ ನೀಡಿದೆ. ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ಲಸಿಕಾ ಅಭಿಯಾನ ಉತ್ತಮವಾಗಿದೆ. ಹಾಗಾಗಿ ನಾಲ್ಕನೆ ಅಲೆ ಎದುರಾದರೂ ಸಾರ್ವಜನಿಕರು ಹೆದರುವ ಅಗತ್ಯ ಇಲ್ಲ. ರಾಜ್ಯದಲ್ಲಿ 1.25 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. 13.1 ಲಕ್ಷ ಮಂದಿಗೆ ಬೂಸ್ಟರ್ ಲಸಿಕೆಯನ್ನು ನೀಡಲಾಗಿದೆ. 12-14 ವರ್ಷದ 1.18 ಲಕ್ಷ ಮಕ್ಕಳಿಗೂ ಲಸಿಕೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ನಾಲ್ಕನೆ ಅಲೆಯಿಂದಲೂ ಏನೂ ಸಮಸ್ಯೆ ಇಲ್ಲ ಎಂದು ಹೇಳಲಾಗಿದೆಯಾದರೂ ಸೋಂಕನ್ನು ತಡೆಯುವ ಮುನ್ನೆಚರಿಕೆ ಕ್ರಮಗಳನ್ನು ಅನುಸರಿಸುವುದು ಅಗತ್ಯ ಇದೆ. ಗ್ರಾಮೀಣ ಭಾಗದಲ್ಲಿ ಜನ ಮಾಸ್ಕ್ ಹಾಕುವುದನ್ನೇ ಮರೆತಿದ್ದಾರೆ. ಇಲ್ಲಿ ಕಡ್ಡಾಯಗೊಳಿಸಬೇಕಾದ ಅನಿವಾರ್ಯತೆ ಇದೆ. ಹಾಗೆಯೇ ಇನ್ನು ಮುಂದೆ ಒಳಾಂಗಣದಲ್ಲಿ ಮಾಸ್ಕ್ ಕಡ್ಡಾಯ ಮಾಡುವ ಚಿಂತನೆಯನ್ನು ಸರ್ಕಾರ ನಡೆಸಿದೆ. ಶೀಘ್ರವೇ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ಈ ಬಗ್ಗೆ ನಡೆಸಿ ನಿರ್ಧರಿಸಲಾಗುವುದು ಎಂದು ಹೇಳಿದರು.

ಸದ್ಯಕ್ಕೆ ಸಮಸ್ಯೆ ಇಲ್ಲ, ಮುಖ್ಯಮಂತ್ರಿ ಜತೆ ಚರ್ಚಿಸಿ ಸ್ಪಷ್ಟ ನಿಲುವು | 4ನೇ ಅಲೆ ಎದುರಿಸಲು ಸಿದ್ಧತೆ

# ಆಗಸ್ಟ್‌ನಲ್ಲಿ ಕೋವಿಡ್ 4ನೇ ಅಲೆ ಸಾಧ್ಯತೆ

**ವಿಧಾನಪರಿಷತ್:** ರಾಜ್ಯದಲ್ಲಿ ಕೋವಿಡ್ 4ನೇ ಅಲೆ ಆಗಸ್ಟ್‌ನಲ್ಲಿ ಬರುವ ಸಂಭವ ವಿದ್ದು, ಇದರ ತಡೆಗೆ ಸರ್ಕಾರ ಸಿದ್ಧತೆ ನಡೆಸಿಕೊಂಡಿದ್ದು, ಶೀಘ್ರದಲ್ಲಿಯೇ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸ ಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ಶೂನ್ಯ ವೇಳೆಯಲ್ಲಿ ಬಿಜೆಪಿ ಸದಸ್ಯ ಶಶೀಲ್ ನಮೋಶಿ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಹಿಂದೆ ಬಿಎ-1, ಬಿಎ 1.1 ಎಂಬ ವೈರಸ್ ಇತ್ತು. ಈಗ ಬಿಎ-2 ವೈರಸ್ ಪತ್ತೆಯಾಗಿದೆ. ಫಿಲಿಪೈನ್ಸ್‌ನಲ್ಲಿ ಮೊದಲು ಇದು ಪತ್ತೆಯಾಗಿದ್ದು ನಂತರ 40 ದೇಶಗಳಲ್ಲಿ ಕಾಣಿಸಿಕೊಂಡಿದೆ. ಐಐಟಿ ಕಾನ್ಪುರದವರು 3ನೇ ಅಲೆ ಬಗ್ಗೆ ಹೇಳಿದ್ದರು. ಈಗ ಅವರೇ 4ನೇ ಅಲೆ ಆಗಸ್ಟ್‌ನಲ್ಲಿ ಬರಲಿದೆ ಎಂದು ಹೇಳಿದ್ದಾರೆ. ನಮ್ಮಲ್ಲಿ ಲಸಿಕಾಕರಣ ಹೆಚ್ಚಳ ಮಾಡಿದ್ದು, ಶೇ. 101.7ರಷ್ಟು ಮೊದಲ ಡೋಸ್ ಹಾಗೂ ಶೇ.96ರಷ್ಟು ಎರಡನೇ ಡೋಸ್ ನೀಡಿದ್ದೇವೆ. ಶೀಘ್ರದಲ್ಲೇ ಸಿಎಂ ಜತೆಗೆ ಸಭೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

## ಆಕ್ಸಿಜನ್ ಉತ್ಪಾದನೆ ಹೆಚ್ಚಳ



ರಾಜ್ಯದಲ್ಲಿ 55,256 ಆಕ್ಸಿಜನ್ ಸಹಿತ ಬೆಡ್‌ಗಳಿವೆ. ಆಕ್ಸಿಜನ್ ಸಾಮರ್ಥ್ಯವನ್ನು 3 ಸಾವಿರ ಮೆಟ್ರಿಕ್ ಟನ್‌ಗೆ ಏರಿಸಲಾಗಿದೆ. 1170 ಮೆ.ಟನ್ ಆಕ್ಸಿಜನ್ ಉತ್ಪಾದನೆ ಇದೆ. ಸಂಗ್ರಹ ಸಾಮರ್ಥ್ಯವೂ ಹೆಚ್ಚಿದ್ದು, ದಿನಕ್ಕೆ 2.5 ಲಕ್ಷ ತಪಾಸಣೆ ನಡೆಸಲಾಗುತ್ತದೆ. ಮೂರು ಅಲೆಗಳನ್ನು ನಿರ್ವಹಣೆ ಮಾಡಿದ ಅನುಭವದ ಮೇಲೆ ಚಿಕಿತ್ಸೆ ನೀಡಲು ಪರಿಣಾಮಕಾರಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಯಾವುದೇ ಆತಂಕ ಬೇಡ, ಎಚ್ಚರಿಕೆ ಇರಬೇಕು ಎಂದು ಸಚಿವರು ತಿಳಿಸಿದರು.

# ಬಿಬಿಎಂಪಿ ಲಾರಿ ವೇಗಕ್ಕೆ ಬಾಲಕಿ ಬಲಿ

**ಬೆಂಗಳೂರು:** ಬಿಬಿಎಂಪಿ ಕಸದ ಲಾರಿಯಿಂದ ಉಂಟಾದ ಅಪಘಾತದಲ್ಲಿ 14 ವರ್ಷದ ವಿದ್ಯಾರ್ಥಿನಿ ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮೃತ ಬಾಲಕಿ ಸದಾಶಿವನಗರದ ಸ್ಟೆಲ್ಲಾ ಮೇರಿಸ್ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ ಎಂದು ಗುರುತಿಸಲಾಗಿದೆ. ಮಳೆ ಬಂದಿದ್ದರಿಂದಾಗಿ ಅಂಡರ್ ಪಾಸ್‌ನಲ್ಲಿ ನಿಂತಿದ್ದರೆಂದು ತಿಳಿದು ಬಂದಿದೆ. ಮೇಕ್ರಿ ಸರ್ಕಲ್ ಕಡೆಯಿಂದ ಬಂದ ಬಿಬಿಎಂಪಿ ಕಸದ ಲಾರಿ ವಿಕಾವಿಕಿ ವಿದ್ಯಾರ್ಥಿನಿಗೆ ಗುದ್ದಿದೆ.

ಗಂಭೀರಗಾಯಗೊಂಡಆಕೆಯನ್ನು ತಕ್ಷಣ ಯಲಹಂಕ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಇಬ್ಬರು ದಾರಿಹೋಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇದೇ ಸಂದರ್ಭದಲ್ಲಿ ಕಾರ್ ಗುದ್ದಿದ್ದರಿಂದ ಬೈಕ್ ಸವಾರನಿಗೆ ಗಾಯವಾಗಿದೆ. ಆರ್‌ಟಿ ನಗರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





"ಗಂಟೆಗೆ 30 ಸಾವಿರ ವಾಹನಗಳು ಚಲಿಸು ಏರ್ ಪೋರ್ಟ್ ರಸ್ತೆಯಲ್ಲಿ ಅಪಘಾತದ ಸಂಖ್ಯೆ ತೀವ್ರವಾಗಿದೆ. ಇಲ್ಲಿರುವ ಮೂರು ಅಡಿ ಎತ್ತರದ ಡಿವೈಡರ್ ದಾಟಿ ಬರುವಾಗ ಈ ಅಫಘಾತ ಸಂಭವಿಸಲಿದೆ. 3 ಅಡಿ ಇರುವ ಡಿವೈಡರ್ ಅನ್ನು ಇನ್ನೂ ಎತ್ತರಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು.

■ ಗೌರವ್ ಗುಪ್ತ, ಬಿಬಿಎಂಪಿ ಮುಖ್ಯ ಆಯುಕ್ತ

## ಲಾರಿ ಕೆಳಗೆ ಮಲಗಿದ್ದವ ಸಾವು

ರಾತ್ರಿ ಮಳೆ ಬಂದ ಕಾರಣ ಲಾರಿ ಕೆಳಗೆ ಮಲಗಿದ್ದ ವ್ಯಕಿಯಯನ್ನು ಗಮನಿಸದ ಚಾಲಕ ಲಾರಿಯನ್ನು ಚಾಲನೆ ಮಾಡಿದ್ದಾನೆ. ಎಲ್. ಆರ್. ನಗರದ ನಿವಾಸಿ ಇಮ್ಯಾನುಯಲ್ (40) ಮೃತಪಟ್ಟಿದ್ದಾರೆ. ಅಶೋಕ್‌ನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ.

# ಆಗಸ್ಟ್‌ನಲ್ಲಿ ಕೋವಿಡ್ 4ನೇ ಅಲೆ ಸಾಧ್ಯತೆ: ಸುಧಾಕರ್

ಬೆಂಗಳೂರು, ಮಾ.21: ದೇಶದಲ್ಲಿ ಆಗಸ್ಟ್ ತಿಂಗಳಿನಲ್ಲಿ ಮತ್ತೊಮ್ಮೆ ಕೋವಿಡ್ ಸೋಂಕು ಸಂಬಂಧ ನಾಲ್ಕನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಆತಂಕ ವ್ಯಕ್ತಪಡಿಸಿದರು.

ಸೋಮವಾರ ವಿಧಾನ ಪರಿಷತ್ತಿನ ಕಲಾಪದ ಶೂನ್ಯ ವೇಳೆಯಲ್ಲಿ ಬಿಜೆಪಿಯ ಶಿಶಿಲ್ ನಮೋಷಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೋವಿಡ್ ರೂಪಾಂತರ ಉಪತಳಿ ಬಿಎ-2 ಫಿಲಿಪ್ಪೈನ್ಸ್‌ನಲ್ಲಿ ಕಾಣಿಸಿಕೊಂಡು ನಂತರ 40 ದೇಶಗಳಲ್ಲಿ ಕಾಣಿಸಿಕೊಂಡಿದೆ. ಈ ಮೊದಲು ಮೂರನೇ ಅಲೆ ಕಾಣಿಸಿಕೊಳ್ಳುವ ಮುನ್ಸೂಚನೆ ನೀಡಿದ ಸಂಸ್ಥೆಯೇ ಇದೀಗ 4ನೇ ಅಲೆ ಆಗಸ್ಟ್‌ನಿಂದ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಸುಳಿವು ನೀಡಿದೆ ಎಂದು ತಜ್ಞರು ಹೇಳಿದ್ದಾರೆ ಎಂದರು.

ಆಗಸ್ಟ್‌ನಲ್ಲಿ ಕಾಣಿಸಿಕೊಳ್ಳಲಿದೆ ಎನ್ನಲಾಗಿರುವ 4ನೇ ಅಲೆಯ ಸೋಂಕಿನ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದ ಅವರು, ರಾಜ್ಯದಲ್ಲಿ ಲಸಿಕಾ ಅಭಿಯಾನಕ್ಕೆ ವೇಗ ನೀಡಲಾಗಿದೆ. ಹೀಗಾಗಿ 4ನೇ ಅಲೆ ಎದುರಾದರೂ ಸಾರ್ವಜನಿಕರು ಭಯ, ಆತಂಕ ಪಡುವ ಅಗತ್ಯವಿಲ್ಲ ಎಂದು ನುಡಿದರು.

1.25 ಕೋಟಿಗೂ ಅಧಿಕ ಡೋಸ್ ಲಸಿಕೆ ನೀಡಲಾಗಿದೆ. ಇದರ ಜತೆಗೆ ಹೆಚ್ಚುವರಿ ಲಸಿಕೆಯನ್ನು ನೀಡಲಾಗುತ್ತಿದ್ದು, 8ನೇ ಪುಟಕ್ಕೆ

# ಬಿಬಿಎಂಪಿ ಕಸದ ಲಾರಿ ಢಿಕ್ಕಿ: 13 ವರ್ಷದ ಬಾಲಕಿ ಮೃತ್ಯು




ಬೆಂಗಳೂರು, ಮಾ.21: ಬಿಬಿಎಂಪಿ ಕಸದ ಲಾರಿ ಢಿಕ್ಕಿ ಹೊಡೆದ ಪರಿಣಾಮ 13 ವರ್ಷದ ಬಾಲಕಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿರುವ ಘಟನೆ ಆರ್‌ಟಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಅಕ್ಷಯಾ(13) ಮೃತಪಟ್ಟ ವಿದ್ಯಾರ್ಥಿನಿಯಾಗಿದ್ದು, ಘಟನೆಯಲ್ಲಿ ಇಬ್ಬರು ಗಂಭೀರ ಗಾಯಗೊಂಡಿದ್ದು, ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸದಾಶಿವನಗರ ಶಾಲೆಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿರುವ ಅಕ್ಷಯಾ, ಬೆಂಗಳೂರು-ಬಳ್ಳಾರಿ ಹೆದ್ದಾರಿಯ ಹೆಬ್ಬಾಳ ಪೊಲೀಸ್ ಠಾಣೆ ಎದುರು ಸೋಮವಾರ ಮಧ್ಯಾಹ್ನ 12.30ರ ಸುಮಾರಿನಲ್ಲಿ ರಸ್ತೆ ದಾಟುತ್ತಿದ್ದರು. ಆ ಸಂದರ್ಭದಲ್ಲಿ ಮೇಕ್ರಿ ಸರ್ಕಲ್ ಕಡೆಯಿಂದ ಬಂದ ಬಿಬಿಎಂಪಿ ಕಸದ ಲಾರಿ ಏಕಾಏಕಿ ನುಗ್ಗಿ ವಿದ್ಯಾರ್ಥಿನಿಗೆ ಢಿಕ್ಕಿ ಹೊಡೆದಿದೆ ಎನ್ನಲಾಗಿದೆ.

ಗಂಭೀರ ಗಾಯಗೊಂಡ ಆಕೆಯನ್ನು ತಕ್ಷಣ ಯಲಹಂಕ ಆಸ್ಪತ್ರೆಗೆ ಕರೆದೊಯ್ದರಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

## ಕೆಳಸೇತುವೆಯಲ್ಲಿ ನೀರು

ಹೆಬ್ಬಾಳ ಬಸ್ ನಿಲ್ದಾಣಕ್ಕೆ ಹೊಂದಿಕೊಂಡು ಕೆಳಸೇತುವೆ ಇದ್ದು, ಅದರ ಮೂಲಕವೇ ಪಾದಚಾರಿಗಳು ರಸ್ತೆ ದಾಟುತ್ತಿದ್ದರು. ಆದರೆ, ರವಿವಾರ ರಾತ್ರಿ ಸುರಿದ ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಂತುಕೊಂಡಿತ್ತು. ಜನರು ಓಡಾಡಲು ಕಷ್ಟಪಡಬೇಕಾಗಿತ್ತು. ಹೀಗಾಗಿ, ಜನರೆಲ್ಲರೂ ಪ್ರಮುಖ ರಸ್ತೆಯಲ್ಲೇ ನಡೆದುಕೊಂಡು, ರಸ್ತೆ ದಾಟುತ್ತಿದ್ದರು. ರಸ್ತೆ ದಾಟುವ ವೇಳೆಯಲ್ಲೇ ವೇಗವಾಗಿ ಬಂದ ಲಾರಿ, ಬಾಲಕಿ ಸೇರಿ ಮೂವರಿಗೆ ಗುದ್ದಿತ್ತು. ಜೊತೆಗೆ ಬೈಕ್‌ಗೂ ಲಾರಿ ಢಿಕ್ಕಿ ಹೊಡೆದಿದ್ದು, ಅದರ ಸವಾರ ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಜೆವಾಣಿ
1982



# ಅತಿ ಕಡಿಮೆ ಸೋಂಕು ದಾಖಲು



ನವದೆಹಲಿ,ಮಾ.21– ದೇಶದಲ್ಲಿ ಕಳೆದ ಮೂರು ತಿಂಗಳ ಬಳಿಕ ಅತಿ ಕಡಿಮೆ ಸೋಂಕು ಮತ್ತು ಸಾವಿನ ಸಂಖ್ಯೆ ದಾಖಲಾಗಿದೆ. ಕಳೆದ 24 ಗಂಟೆಗಳಲ್ಲಿ ದೇಶದಲ್ಲಿ 1,549 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು 31 ಮಂದಿ ಮೃತಪಟ್ಟಿದ್ದಾರೆ. ಜೊತೆಗೆ 2,652 ಮಂದಿ ಸೋಂಕಿನಿಂದ ಚೇತರಿಸಿಕೊಂಡು ಬಿಡುಗಡೆಯಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಸೋಂಕು ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸೋಂಕಿನ ಒಟ್ಟಾರೆ ಶೇಕಡವಾರು ಪ್ರಮಾಣ ಗಣನೀಯವಾಗಿ ಕುಸಿದಿದ್ದು ಸದ್ಯ ಈ ಪ್ರಮಾಣ ಶೇ. 0.06 ರಷ್ಟು ಇದೆ. ಸೋಂಕಿನ ಸಕ್ರಿಯ ಪ್ರಕರಣಗಳ ಸಂಖ್ಯೆ ಅತಿ ಕಡಿಮೆ ದಾಖಲಾಗಿದ್ದು ಸದ್ಯ ಈ ಸಂಖ್ಯೆ 25,106 ಮಂದಿಯಲ್ಲಿ ಇದೆ ಎಂದು ತಿಳಿಸಲಾಗಿದೆ.

ಕೊರೊನಾ ಸೋಂಕಿನ ದಿನದ ಪಾಸಿಟಿವಿಟಿ ಪ್ರಮಾಣ ಶೇ.0.40 ರಷ್ಟು ಇದ್ದು ವಾರದ ಸರಾಸರಿ ಪ್ರಮಾಣ ಶೇ.0.40 ರಷ್ಟು ಇದೆ. ಈ ಪ್ರಮಾಣ ದಿನದಿಂದ ದಿನಕ್ಕೆ ಇಳಿಕೆಯಾಗುತ್ತಿದೆ ಇದು ಒಳ್ಳೆಯ ಬೆಳವಣಿಗೆ ಎಂದು ತಿಳಿಸಲಾಗಿದೆ.

ದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 3,84,499 ಮಂದಿಗೆ ಸೋಂಕು ಪತ್ತೆ ಪರೀಕ್ಷೆ ಮಾಡಲಾಗಿದೆ .ಇದರೊಂದಿಗೆ ಒಟ್ಟು ಸೋಂಕಿನ ಪರೀಕ್ಷಾ ಪ್ರಮಾಣದ ಸಂಖ್ಯೆ 78.30 ಕೋಟಿಗೆ ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ.

ಇದರ ಜೊತೆಗೆ ಇಲ್ಲಿಯ ತನಕ 181 .24 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ತಿಳಿಸಿದೆ.

**ಚೇತರಿಕೆ ಮತ್ತಷ್ಟು ಏರಿಕೆ**

ದೇಶದಲ್ಲಿ ದಿನದಿಂದ ದಿನಕ್ಕೆ ಸೋಂಕು ಸಂಖ್ಯೆ ಕುಸಿತ ಕಂಡ ಹಿನ್ನೆಲೆಯಲ್ಲಿ ಸೋಂಕಿನ ಚೇತರಿಕೆ ಪ್ರಮಾಣ ಹೆಚ್ಚಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ

ದೇಶದಲ್ಲಿ ಸೋಂಕಿನ ಚೇತರಿಕೆ ಪ್ರಮಾಣ ಶೇ. 98.74 ಕ್ಕೆ ಹೆಚ್ಚಳವಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.